# Snapchat ಕುರಿತ ಪಾಲಕರು ಮತ್ತು ಪೋಷಕರ ಮಾರ್ಗದರ್ಶಿ



## ಇದರ ಒಳಗೇನಿದೆ?

- Snapchat ನ ವೈಶಿಷ್ಟ್ಯಗಳು
- ಸಾಮಾನ್ಯ ಎಫ್‌ಎಕ್ಯೂಗಳು
- ಸುರಕ್ಷತೆ ಮತ್ತು ಕ್ಷೇಮ ಸಂಪನ್ಮೂಲಗಳು
- ಆರಂಭಿಕ ಸಂಭಾಷಣೆಗಳು

# Snap Inc. ನಲ್ಲಿ ಕೆಲಸ ಮಾಡುವ ಪಾಲಕರಿಂದ ಪತ್ರ

ಆತ್ಮೀಯ ಪಾಲಕರೇ ಮತ್ತು ಪೋಷಕರೇ,

ನಿಮ್ಮ ಹದಿಹರೆಯದ ಮಕ್ಕಳು Snapchat ಖಾತೆ ರಚಿಸಿದ್ದಾರೆ. ಈಗೇನು ಮಾಡಬೇಕು? ನಿಮಗೆ ಸಂಶಯ ಶುರುವಾಗಿದೆ. ಕಂಟೆಂಟ್‌ಗಳು ಡೀಫಾಲ್ಟ್ ಅಗಿ ಅಳಿಸಿಹೋಗುವ ಆ್ಯಪ್ ಅನ್ನು ನಿಮ್ಮ ಹದಿಹರೆಯದ ಮಕ್ಕಳು ಯಾಕೆ ಬಳಸಬೇಕು? ಸಾಮಾಜಿಕ ಮಾಧ್ಯಮ ಪ್ಲಾಟ್‌ಫಾರ್ಮ್‌ಗಳು ನಿರಂತರವಾಗಿ ಸುಧಾರಣೆಗೊಳ್ಳುತ್ತಿವೆ ಹಾಗೂ ಎಲ್ಲವನ್ನೂ ನೋಡಿಕೊಳ್ಳುವುದು ಕಷ್ಟಕರ ಎಂಬುದು ನಮಗೆ ತಿಳಿದಿದೆ. ಪ್ರಶ್ನೆಗಳು ಮತ್ತು ಆತಂಕಗಳು ಇರುವುದು ಸ್ವಾಭಾವಿಕ ಮತ್ತು Snapchat ಬಗ್ಗೆ ತಿಳಿಯಲು ಹಾಗೂ ನಿಮ್ಮ ಹದಿಹರೆಯದ ಮಕ್ಕಳಿಗೆ ತಿಳಿವಳಿಕೆ ನೀಡಲು ಮತ್ತು ಸಬಲಗೊಳಿಸಲು ಈ ಮಾರ್ಗದರ್ಶಿ ಸಹಾಯ ಮಾಡುತ್ತದೆ ಮತ್ತು ಸಂಪನ್ಮೂಲವಾಗಿ ಕೆಲಸ ಮಾಡುತ್ತದೆ ಎಂದು ನಾವು ಭಾವಿಸಿದ್ದೇವೆ.

ನಮ್ಮ ಆ್ಯಪ್ ಬಳಸುವಾಗ ನಿಮ್ಮ ಹದಿಹರೆಯದ ಮಗ/ಮಗಳು ಅತ್ಯಂತ ಸಂರಕ್ಷಿತಗೊಂಡಿರುತ್ತಾರೆ ಮತ್ತು ಮಾಹಿತಿಯುತವಾಗಿರುತ್ತಾರೆ ಎಂಬುದನ್ನು ನೀವು ಖಚಿತಪಡಿಸಿಕೊಳ್ಳಲು ಬಯಸಿದ್ದೀರಿ ಎಂಬುದನ್ನು ನಾವು ಗುರುತಿಸಿದ್ದೇವೆ. ಹದಿಹರೆಯದವರಿಗೆ ತಮ್ಮ ಕ್ರಿಯಾಶೀಲತೆಯನ್ನು ಮತ್ತು ತಮ್ಮ ಅಸ್ತಿತ್ವವನ್ನು ಅಭಿವ್ಯಕ್ತಗೊಳಿಸಲು ಅವಕಾಶ ಒದಗಿಸುವುದು ನಮ್ಮ ಗುರಿಯಾಗಿದೆ. ಸಾಂಪ್ರದಾಯಿಕ ಸಾಮಾಜಿಕ ಮಾಧ್ಯಮಕ್ಕಿಂತ Snapchat ವಿಭಿನ್ನವಾಗಿದೆ. ಯಾಕೆಂದರೆ, ಈ ಆ್ಯಪ್ ಅನ್ನು ಆತ್ಮೀಯ ಸ್ನೇಹಿತರೊಂದಿಗೆ ಸಂಪರ್ಕದಲ್ಲಿರಲು ಒಂದು ಮೋಜಿನ ವಿಧಾನವಾಗಿ ರಚಿಸಲಾಗಿದೆಯೆ ಹೊರತು ಅಪರಿಚಿತರೊಂದಿಗಲ್ಲ.

**" ತಮ್ಮ ಬಹುತೇಕ ಕಂಟೆಂಟ್ ಡೀಫಾಲ್ಟ್ ಆಗಿ ಅಳಿಸಿಹೋಗುವ ಒಂದು ಆ್ಯಪ್ ಅನ್ನು ನನ್ನ ಹದಿಹರೆಯದ ಮಗ/ಮಗಳು ಯಾಕೆ ಬಳಸಬೇಕು? "**

ಇತರ ಪ್ಲಾಟ್‌ಫಾರಂಗಳಂತೆ ನಾವು ಸಾರ್ವಜನಿಕರ ಕಾಮೆಂಟ್‌ಗಳಿಗೆ ಅವಕಾಶ ಕಲ್ಪಿಸುವುದಿಲ್ಲ ಮತ್ತು ನಮ್ಮ ಡೀಫಾಲ್ಟ್ ಸೆಟ್ಟಿಂಗ್‌ಗಳಲ್ಲಿ, ತಾವು ಸ್ನೇಹಿತರನ್ನಾಗಿ ಸೇರಿಸಿದವರಿಂದ ಮಾತ್ರ Snapchatter ಸಂದೇಶಗಳನ್ನು ಸ್ವೀಕರಿಸುವಂತಿರುತ್ತದೆ.

ಸ್ನೇಹಿತರೊಂದಿಗೆ ಮಾತನಾಡುವುದರಾಚೆಗೆ, ಕುಟುಂಬಗಳು ಸಂಪರ್ಕಿತವಾಗಿರಲು Snapchat ಉತ್ತಮವಾಗಿದೆ. ಮೋಜಿನ ಮತ್ತು ಸಹಜ ವಿಧಾನದಲ್ಲಿ ಸಂವಹನ ನಡೆಸಲು ನಿಮ್ಮ ಕ್ರಿಯಾಶೀಲತೆಯನ್ನು ಬಳಸಲು Snapchat ಸಹಾಯ ಮಾಡುತ್ತದೆ! ಪರಸ್ಪರ ಮೋಜಿಗೆ ಇದು ಒಂದು ಸ್ಥಳವಾಗಿದೆ (ಮಾಡಬೇಕಾದ ಕೆಲಸಗಳ ಪಟ್ಟಿಯ ಅಥವಾ ಪಾತ್ರೆ ತೊಳೆಯುವ ಕೆಲಸದ ಜ್ಞಾಪನೆಗಳ ಬಗ್ಗೆ ಚಿಂತೆ ಇಲ್ಲದೇ). ಬದಲಿಗೆ, ಲಘುಹಾಸ್ಯದ ಚಿತ್ರಗಳನ್ನು ಕಳುಹಿಸಲು ಮತ್ತು ಈ ಕ್ಷಣದಲ್ಲಿ ಬದುಕಲು ಅವಕಾಶ ಪಡೆಯುತ್ತೀರಿ (ನಿಮ್ಮ ಕ್ಯಾಮೆರಾ ರೋಲ್ ಅನ್ನು ವಿಪರೀತವಾಗಿ ಬಳಸದೇ!). ನಿಮ್ಮ ಮಗು ಶಾಲೆಯಲ್ಲಿದ್ದಾಗ ನಿಮ್ಮ ಕುಟುಂಬದ ಸಾಕುಪ್ರಾಣಿಯ ಚಿತ್ರಗಳನ್ನು Snap ಮಾಡಲು Snapchat ಬಳಸಿ ಅಥವಾ ನಿಮ್ಮ ಹದಿಹರೆಯದ ಮಕ್ಕಳ ಬಗ್ಗೆ ತಮಾಷೆ ಮಾಡಲು ನಮ್ಮ ಲೆನ್ಸ್‌ಗಳನ್ನು ಸೇರಿಸಿಕೊಳ್ಳಿ!

ಸಂವಹನಕ್ಕೆ ಅನುವು ಮಾಡುವ ಯಾವುದೇ ಆ್ಯಪ್, ನಿಂದನೆಗೆ ಒಳಗಾಗುವ ಸಾಧ್ಯತೆ ಇರುತ್ತದೆ ಎಂದು ನಾವು ಅರ್ಥ ಮಾಡಿಕೊಂಡಿದ್ದೇವೆ. ಇದೇ ಕಾರಣಕ್ಕೆ ನಾವು ನಮ್ಮ ಹೆಚ್ಚಿನ ಸಮಯ, ಸಂಪನ್ಮೂಲಗಳು ಮತ್ತು ಶಕ್ತಿಯನ್ನು ನಮ್ಮ ಪ್ಲಾಟ್‌ಫಾರಂ ಸುರಕ್ಷತೆಯ ಮೇಲೆ ಹರಿಸಿದ್ದೇವೆ ಮತ್ತು ಹರಿಸುತ್ತಲೇ ಇದ್ದೇವೆ. ಆ್ಯಪ್ ಒಳಗೆ ವರದಿ ಮಾಡುವುದು, ನಮ್ಮ ಸಮುದಾಯದ ಮಾರ್ಗಸೂಚಿಗಳು ಮತ್ತು ವ್ಯಾಪಕ ಪ್ರಮಾಣದ ಸಕ್ರಿಯ ಸುರಕ್ಷತಾ ಪಾಲುದಾರರ ಮೂಲಕ, ಹದಿಹರೆಯದವರ ಸುರಕ್ಷತೆಯೇ ನಮ್ಮ ಆದ್ಯತೆ ಎಂದು ನಾವು ನಮ್ಮ ಹದಿಹರೆಯದ ಮಕ್ಕಳಿಗೆ ತಿಳಿಸುತ್ತೇವೆ.

ಸುರಕ್ಷಿತವಾಗಿ ನಿಮ್ಮನ್ನು ಅಭಿವ್ಯಕ್ತಪಡಿಸುವುದು, ಈ ಕ್ಷಣದಲ್ಲಿ ಜೀವಿಸುವುದು, ವಿಶ್ವದ ಬಗ್ಗೆ ತಿಳಿಯುವುದು ಮತ್ತು ಒಟ್ಟಾಗಿ ಮೋಜು ಮಾಡುವುದಕ್ಕೆ ನಿಮಗೆ ಮತ್ತು ನಿಮ್ಮ ಕುಟುಂಬಕ್ಕೆ ಅನುವು ಮಾಡುವ ಹೆಚ್ಚಿನ ಮಾಹಿತಿಯನ್ನು ಒದಗಿಸುವುದಕ್ಕಾಗಿ ನಾವು ಈ ಪಾಲಕರ ಮಾರ್ಗದರ್ಶಿಯನ್ನು ರಚಿಸಿದ್ದೇವೆ. ನಿಮ್ಮ ಹದಿಹರೆಯದ ಮಗ/ಮಗಳು ಆನ್‌ಲೈನ್‌ನಲ್ಲಿ ಏನು ಮಾಡುತ್ತಿದ್ದಾರೆ ಎಂಬುದರ ಬಗ್ಗೆ ಮುಕ್ತ ಮತ್ತು ಪ್ರಾಮಾಣಿಕ ಸಂವಾದಗಳನ್ನು ಮಾಡುತ್ತಿರುವಾಗ ಇದು ನಿಮಗೆ ಸಹಾಯಕ ಎಂದು ನಾವು ಭಾವಿಸಿದ್ದೇವೆ.

**ನೆನಪಿಡಿ, ನಿಮಗಾಗಿ ಮತ್ತು ನಿಮ್ಮ ಹದಿಹರೆಯದ ಮಗ/ಮಗಳಿಗಾಗಿ ನಾವು ಇಲ್ಲಿದ್ದೇವೆ!**

**- Snap Inc. ನಲ್ಲಿ ಕೆಲಸ ಮಾಡುತ್ತಿರುವ ಪಾಲಕರು.**



# ವಿಷಯಗಳ ಪರಿವಿಡಿ

3 Snapchat ಎಂದರೇನು?

4 ಸಾಮಾನ್ಯ ಎಫ್ಎಕ್ಯೂಗಳು

6 ಪ್ರಮುಖ ವೈಶಿಷ್ಟ್ಯಗಳು

7 ನಮ್ಮ ಗೌಪ್ಯತೆಯ ತತ್ವಗಳು

8 ಸಹಾಯಕ ಸುರಕ್ಷತೆ ಸಲಹೆಗಳು

9 ಸೌಖ್ಯ ಸಂಪನ್ಮೂಲಗಳು

10 Snapchat ಬಗ್ಗೆ ನಿಮ್ಮ ಹದಿಹರೆಯದ ಮಗ/ಮಗಳ ಜೊತೆ ಮಾತನಾಡುವುದು ಹೇಗೆ

# Snapchat 101

## Snapchat ಎಂದರೇನು?



Snapchat ಮೆಸೇಜಿಂಗ್ ಮತ್ತು ಕ್ಯಾಮೆರಾ ಆ್ಯಪ್ ಆಗಿದ್ದು, ಇತ್ತೀಚಿನ ದಿನಗಳಲ್ಲಿ ತಮ್ಮ ಸ್ನೇಹಿತರೊಂದಿಗೆ ಸಂವಹನ ನಡೆಸಲು ಹದಿಹರೆಯದ ಮಕ್ಕಳಿಗೆ ಇರುವ ಏಕೈಕ ವಿಧಾನ ಎಂದು ಪಾಲಕರು ಅಥವಾ ಬೋಧಕರಾಗಿ ನಿಮಗೆ ತಿಳಿದಿರಬಹುದು. ಆರಂಭದಿಂದಲೂ, ನಿಜವಾದ ಸ್ನೇಹಿತರು ದೂರವಿದ್ದಾಗ ಪರಸ್ಪರ ಸಂಪರ್ಕ ಸಾಧಿಸುವುದರ ಮೇಲೆ ಮತ್ತು ಆ ಕ್ಷಣದಲ್ಲಿ ಆರಾಮದಾಯಕವಾಗಿ ಅಭಿವ್ಯಕ್ತಪಡಿಸಲು ಅನುವು ಮಾಡುವುದರ ಮೇಲೆ ನಾವು ಗಮನ ಹರಿಸಿದ್ದೇವೆ. ತಮ್ಮ ಕ್ಯಾಮೆರಾ ಮೂಲಕ ತಮ್ಮನ್ನು ತಾವು ಅಭಿವ್ಯಕ್ತಗೊಳಿಸುವುದು ಆರಾಮದಾಯಕ ಎಂಬ ಭಾವವನ್ನು ಜನರಲ್ಲಿ ಮೂಡಿಸಲು ಪರಿಕರದ ರೂಪದಲ್ಲಿ Snapchat ಅನ್ನು ನಾವು ರಚಿಸಿದ್ದೇವೆ.

Snapchat ಅನ್ನು ಉದ್ದೇಶಪೂರ್ವಕವಾಗಿ ಸಾಂಪ್ರದಾಯಿಕ ಸಾಮಾಜಿಕ ಮಾಧ್ಯಮಕ್ಕಿಂತ ವಿಭಿನ್ನವಾಗಿ, ನಮ್ಮ ಸಮುದಾಯಕ್ಕೆ ಹೆಚ್ಚು ಸುರಕ್ಷಿತವನ್ನಾಗಿಸುವ ರೀತಿಯಲ್ಲಿ ನಾವು ರೂಪಿಸಿದ್ದೇವೆ. Snapchat ಮತ್ತು ಇತರ ಪ್ಲಾಟ್‌ಫಾರಂಗಳ ಸೂಕ್ತ ಬಳಕೆಯ ಬಗ್ಗೆ ಸಾಮಾನ್ಯ ಸಂವಾದವನ್ನು ಪಾಲಕರು ಮತ್ತು ಹದಿಹರೆಯದ ಮಕ್ಕಳು ನಡೆಸುವಂತೆ ನಾವು ಪ್ರೋತ್ಸಾಹಿಸುತ್ತೇವೆ. ಇದೇ ಕಾರಣಕ್ಕೆ ನಾವು ಈ ಮಾರ್ಗದರ್ಶಿಯನ್ನು ಸಿದ್ಧಗೊಳಿಸಿದ್ದೇವೆ.



# ಸಾಮಾನ್ಯ ಎಫ್‌ಎಕ್ಯೂಗಳು

ನಮ್ಮ ಕ್ಯಾಮೆರಾ ಮೂಲಕ, ಪಠ್ಯ ಸಂದೇಶದ ಮಿತಿಗಳಿಗಿಂತ ಒಂದು Snap ನಲ್ಲಿ ಹೆಚ್ಚಿನದನ್ನು ನಮ್ಮ ಕ್ರಿಯೇಟಿವ್ ಟೂಲ್ಸ್ ಬಳಸಿ ತಮ್ಮನ್ನು ತಾವೇ ಅಭಿವ್ಯಕ್ತಪಡಿಸಲು ಒಂದು ವಿಧಾನವನ್ನು ನಾವು ರೂಪಿಸಿದ್ದೇವೆ. Snapchat ನಲ್ಲಿ, ನೀವು ಹೆಚ್ಚು ಕಾಳಜಿ ವಹಿಸುವ ಜನರೊಂದಿಗೆ ಮುಕ್ತವಾಗಿ ನೀವು ನೀವಾಗಿರಬಹುದು. ನಿಮ್ಮ ಅತ್ಯಂತ ಸಾಮಾನ್ಯ ಪ್ರಶ್ನೆಗಳಿಗೆ ಇಲ್ಲಿ ಕೆಲವು ಉತ್ತರಗಳಿವೆ:


## 1 ಆ್ಯಪ್ ಹೇಗೆ ಕೆಲಸ ಮಾಡುತ್ತದೆ?

ಒಂದು ಖಾತೆಗೆ ನೀವು ಸೈನ್ ಅಪ್ ಮಾಡಿದ ಮತ್ತು ನಿಮ್ಮ Bitmoji ರಚಿಸಿದ ನಂತರ, ಅದನ್ನು ಅನ್ವೇಷಣೆ ಮಾಡುವ ಸಮಯ ಇದು! Snapchat ನಲ್ಲಿ 5 ಟ್ಯಾಬ್‌ಗಳಿವೆ (ಎಡದಿಂದ ಬಲಕ್ಕೆ): ಮ್ಯಾಪ್, ಚಾಟ್, ಕ್ಯಾಮೆರಾ, ಕಥೆಗಳು ಮತ್ತು ಸ್ಪಾಟ್‌ಲೈಟ್. ಕ್ಯಾಮೆರಾದೊಂದಿಗೆ Snapchat ತೆರೆದುಕೊಳ್ಳುತ್ತದೆ.



ಫೋಟೋ ತೆಗೆದುಕೊಳ್ಳಲು ಕ್ಯಾಮೆರಾ ಐಕಾನ್ ಮೇಲೆ ಟ್ಯಾಪ್ ಮಾಡಿ ಅಥವಾ ವೀಡಿಯೋ ಸೆರೆಹಿಡಿಯಲು ಅದನ್ನು ಹಿಡಿದಿರಿ. "Snap" ಗಳು ಎಂದು ಕರೆಯಲಾದ ಚಿತ್ರಗಳು ಅಥವಾ ವೀಡಿಯೋಗಳನ್ನು ನೀವು ಸ್ನೇಹಿತರಿಗೆ ಕಳುಹಿಸಬಹುದು. ಇದನ್ನು ಅಪರಿಚಿತರಿಂದ ಸುಲಭ ಮೆಸೇಜಿಂಗ್‌ಗಾಗಿ ವಿನ್ಯಾಸ ಮಾಡಿಲ್ಲ. ನೀವು ಮೊದಲು ಖಾತೆಯನ್ನು ಸೃಷ್ಟಿಸಿದಾಗ, ನೀವು ಸ್ನೇಹಿತರಾಗಿ ಸೇರಿಸಿಲ್ಲದವರಿಂದ ಡೀಫಾಲ್ಟ್ ಆಗಿ ಸಂದೇಶವನ್ನು ಸ್ವೀಕರಿಸಲಾಗುವುದಿಲ್ಲ.

**ನಿಮ್ಮನ್ನು ಅಭಿವ್ಯಕ್ತಪಡಿಸಿಕೊಳ್ಳಿ!**



ನೀವು ಯಾರೊಂದಿಗೆ ವಿಷಯಗಳನ್ನು ಹಂಚಿಕೊಳ್ಳುತ್ತೀರಿ, ಅವುಗಳನ್ನು ಹೇಗೆ ಹಂಚಿಕೊಳ್ಳುತ್ತೀರಿ, ಮತ್ತು ಅವುಗಳನ್ನು Snapchat ನಲ್ಲಿ ಎಷ್ಟು ಸಮಯ ವೀಕ್ಷಿಸಬಹುದು ಎನ್ನುವುದು ನಿಮ್ಮ ನಿಯಂತ್ರಣದಲ್ಲಿರುತ್ತದೆ.

## 2 Snap ಗಳ ಕುರಿತು ನನಗೆ ಇನ್ನಷ್ಟು ತಿಳಿಸುತ್ತೀರಾ?

ವಾಸ್ತವ ಜಗತ್ತಿನ ಸಂವಾದಗಳ ಹಾಗೆಯೇ ತ್ವರಿತ ಮತ್ತು ಸುಲಭ ಸಂವಹನಕ್ಕೆ Snap ಗಳನ್ನು ರೂಪಿಸಲಾಗಿದೆ! ಇದೇ ಕಾರಣಕ್ಕೆ ನೀವು ಸ್ನೇಹಿತರಿಗೆ Snap ಕಳುಹಿಸಿದಾಗ, ಮಾತಿನ ಮೂಲಕ ಹೇಳಲಾದ ಶಬ್ದಗಳ ಹಾಗೆ ಡೀಫಾಲ್ಟ್ ಆಗಿ Snap ಅಳಿಸಿಹೋಗುತ್ತದೆ. ನಾವು Snapchat ನಲ್ಲಿ ಪ್ರತಿನಿತ್ಯ ನೋಡುವ ಪ್ರಾಮಾಣಿಕ ಸಂಭಾಷಣೆಯ ಮಟ್ಟವನ್ನು ಇದು ಪ್ರಚೋದಿಸುತ್ತದೆ ಎಂದು ನಾವು ನಂಬಿದ್ದೇವೆ.





ನೆನಪಿಡಿ, ಡೀಫಾಲ್ಟ್ ಆಗಿ Snap ಗಳನ್ನು ಅಳಿಸಲು ವಿನ್ಯಾಸ ಮಾಡಲಾಗಿದ್ದರೂ, ಸ್ನೇಹಿತರು ಸ್ಕ್ರೀನ್‌ಶಾಟ್ ತೆಗೆದುಕೊಳ್ಳಬಹುದು, ಸ್ಕ್ರೀನ್ ರೆಕಾರ್ಡ್ ಮಾಡಬಹುದು ಅಥವಾ ಇನ್ನೊಂದು ಸಾಧನದೊಂದಿಗೆ ಸೆರೆಹಿಡಿಯಬಹುದು.



## 3 Snap ನ ಸುರಕ್ಷತಾ ಮಾನದಂಡಗಳು ಯಾವುವು?

Snapchat ನಲ್ಲಿನ ಎಲ್ಲ ಬಳಕೆದಾರರೂ  Snap ನ ಸೇವೆಯ ನಿಯಮಗಳು ಮತ್ತು ಕಮ್ಯುನಿಟಿ ಮಾರ್ಗಸೂಚಿಗಳಿಗೆ  ಬದ್ಧವಾಗಿರಬೇಕು. ಇದು ದ್ವೇಷ ಪ್ರಚೋದಿಸುವ ಮಾತುಗಳು, ತಾರತಮ್ಯ, ತಪ್ಪು ಮಾಹಿತಿ, ಬೆದರಿಕೆ ಹಾಕುವುದು, ಕಿರುಕುಳ ಎಸಗುವುದು, ಹಿಂಸಾತ್ಮಕ ಕಂಟೆಂಟ್ ಮುಂತಾದವುಗಳನ್ನು ಇದು ನಿಷೇಧಿಸುತ್ತದೆ. ಈ ನೀತಿಗಳನ್ನು ಸೃಷ್ಟಿಸುವ ಮತ್ತು ಜಾರಿಗೊಳಿಸುವ ನಿಗದಿತ ತಂಡವನ್ನು Snap ಹೊಂದಿದೆ.



ನಮ್ಮ ಬಳಕೆದಾರರನ್ನು ನಾವು ಹೇಗೆ ರಕ್ಷಿಸುತ್ತೇವೆ ಎಂಬ ಬಗ್ಗೆ ಇನ್ನಷ್ಟು ತಿಳಿಯಲು ನಮ್ಮ ಗೌಪ್ಯತೆ ಕೇಂದ್ರವನ್ನು ನೋಡಿ.

## 4 ಖಾತೆ ಸೃಷ್ಟಿಸಲು ವಯಸ್ಸಿನ ಮಿತಿ ಇದೆಯೇ?

ಹೌದು. ಖಾತೆ ರಚಿಸಲು ಅಥವಾ Snapchat ಬಳಸಲು 13 ಕ್ಕಿಂತ ಕಡಿಮೆ ವಯಸ್ಸಿನ ಯಾರಿಗೂ ಅನುಮತಿ ಇರುವುದಿಲ್ಲ ಮತ್ತು 13 ಕ್ಕಿಂತ ಕಡಿಮೆ ವಯಸ್ಸಿನ ಯಾರಿಗೂ ನಮ್ಮ ಸೇವೆಗಳನ್ನು ನಾವು ಉದ್ದೇಶಿಸಿಲ್ಲ. Snapchat ಬಳಸುತ್ತಿರುವ 13 ಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳನ್ನು ನೀವು ಹೊಂದಿದ್ದರೆ, ನಿಮ್ಮ ಮಗುವಿನ ಬಳಕೆದಾರರ ಹೆಸರು ಮತ್ತು ನಿಮ್ಮ ಸಂಬಂಧದ ಪರಿಶೀಲನೆಯೊಂದಿಗೆ ದಯವಿಟ್ಟು ನಮ್ಮನ್ನು ಸಂಪರ್ಕಿಸಿ.

## 5 ನನ್ನ ಹದಿಹರೆಯದ ಮಗುವನ್ನು Snapchat ನಲ್ಲಿ ನಾನು ಹೇಗೆ ಸುರಕ್ಷಿತವಾಗಿ ಇಡಬಹುದು?

Snapchat ಅನ್ನು ಸಾಂಪ್ರದಾಯಿಕ ಸಾಮಾಜಿಕ ಮಾಧ್ಯಮಕ್ಕಿಂತ ಉದ್ದೇಶಪೂರ್ವಕವಾಗಿ ವಿಭಿನ್ನವಾಗಿ, ನಮ್ಮ ಸಮುದಾಯಕ್ಕೆ ಇನ್ನಷ್ಟು ಹೆಚ್ಚು ಸುರಕ್ಷಿತವಾಗಿಸುವ ರೀತಿಯಲ್ಲಿ ರೂಪಿಸಲಾಗಿದೆ. ಸ್ನೇಹಿತರೊಂದಿಗೆ ಸಂಪರ್ಕಿಸಲು ಮತ್ತು ಸಂವಹನ ನಡೆಸಲು Snapchat ಒಂದು ಸ್ಥಳವಾಗಿದ್ದು, ಸುರಕ್ಷಿತವಾಗಿರುವುದು ಹೇಗೆ ಎಂಬುದನ್ನು ತಿಳಿಯುವುದು ಪ್ರಮುಖವಾಗಿದೆ. ನಮ್ಮ ನೀತಿಗಳು, ನಮ್ಮ ತಂಡ ಮತ್ತು ಪಾಲಕರು ಮತ್ತು ಬೋಧಕರಿಗೆ ಮಾಹಿತಿಯ ಬಗ್ಗೆ ಇನ್ನಷ್ಟು ತಿಳಿಯಲು ನಮ್ಮ ಸುರಕ್ಷತಾ ಕೇಂದ್ರವನ್ನು ಪರಿಶೀಲಿಸುವಂತೆ ನಾವು ಶಿಫಾರಸು ಮಾಡುತ್ತೇವೆ. ನಿಮ್ಮ ಹದಿಹರೆಯದ ಮಕ್ಕಳಿಗೆ ಕೆಲವು ಉಪಯುಕ್ತ ಸಲಹೆಗಳೆಂದರೆ: ಸುರಕ್ಷಿತ ಪಾಸ್‌ವರ್ಡ್ ರಚಿಸುವುದು, ಅವರ ಇಮೇಲ್ ಮತ್ತು ಮೊಬೈಲ್ ಸಂಖ್ಯೆಯನ್ನು ಪರಿಶೀಲಿಸುವುದು, ನಿಜ ಜೀವನದಲ್ಲಿ ಪರಿಚಯ ಇರುವ ಜನರಿಂದ ಮಾತ್ರ ಫ್ರೆಂಡ್ ಕೋರಿಕೆಗಳನ್ನು ಸಮ್ಮತಿಸುವುದು ಮತ್ತು ನಮ್ಮ ಕಮ್ಯುನಿಟಿ ಮಾರ್ಗಸೂಚಿಗಳನ್ನು ಓದಿಕೊಂಡು, ಅವರ ಸ್ನೇಹಿತರೂ ಇದನ್ನು ಅನುಸರಿಸುವಂತೆ ಸಹಾಯ ಮಾಡಲು ಅವರು ಪ್ರಯತ್ನಿಸುವುದು!

**“ ನಿಜ ಜೀವನದಲ್ಲಿ ನಿಮಗೆ ತಿಳಿದಿರುವ ವ್ಯಕ್ತಿಗಳಿಂದ ಮಾತ್ರ ಫ್ರೆಂಡ್ ಕೋರಿಕೆಗಳನ್ನು ಸ್ವೀಕರಿಸಿ. ”**




## 6 ನಾನು ಸುರಕ್ಷತೆ ಕಳವಳವನ್ನು ವರದಿ ಮಾಡುವುದು ಹೇಗೆ?

ಅಸಮರ್ಪಕ ಬಳಕೆದಾರರು ಮತ್ತು ಕಂಟೆಂಟ್ ಅನ್ನು ಗುರುತಿಸಲು ಆ್ಯಪ್ ಒಳಗಿನ ವರದಿಗಳು ಮತ್ತು ಪ್ಲಾಟ್‌ಫಾರಂ ಹೊರತಾದ ಪ್ರತಿಕ್ರಿಯೆಯ ಮೂಲಕ ನಮ್ಮ ಸಮುದಾಯವು ಸಂಪರ್ಕ ಸಾಧಿಸಲು ನಾವು ಸುಲಭಗೊಳಿಸುತ್ತೇವೆ. ಆ್ಯಪ್ ಒಳಗೆ ವರದಿ ಮಾಡುವುದು, ನಮ್ಮ ಬೆಂಬಲ ಪೋರ್ಟಲ್ ಮತ್ತು Snapchat ಬೆಂಬಲTwitter ಖಾತೆಯ ಮೂಲಕ ಯಾವುದೇ ಕಂಟೆಂಟ್ ಅನ್ನು ಬಳಕೆದಾರರು ವರದಿ ಮಾಡಬಹುದು. ನಮ್ಮ ಕಮ್ಯುನಿಟಿ ಮಾರ್ಗಸೂಚಿಗಳಿಗೆ ಅನುಗುಣವಾಗಿ ಕ್ರಮವನ್ನು ತೆಗೆದುಕೊಳ್ಳುತ್ತೇವೆ ಮತ್ತು Snapchat ಸುಧಾರಿಸಲು ಪ್ರತಿಕ್ರಿಯೆಯನ್ನು ಒಟ್ಟುಗೂಡಿಸುತ್ತೇವೆ.

**ಗಮನಿಸಿ:** ಯಾರಾದರೂ ತುರ್ತು ಅಪಾಯದಲ್ಲಿ ಇದ್ದಾರೆ ಎಂದು ನೀವು ಭಾವಿಸಿದರೆ, ತಕ್ಷಣವೇ ನಿಮ್ಮ ಸ್ಥಳೀಯ ಕಾನೂನು ಜಾರಿ ಇಲಾಖೆಯನ್ನು ಸಂಪರ್ಕಿಸಿ.




**“ ನಮ್ಮSnapchatter ಗಳನ್ನು ರಕ್ಷಿಸುವ ಮತ್ತು ಕ್ರಿಯಾಶೀಲತೆ ಮತ್ತು ಸ್ವಯಂ ಅಭಿವ್ಯಕ್ತಿಗೆ ಸುರಕ್ಷಿತ, ಮೋಜಿನ ವಾತಾವರಣವನ್ನು ಒದಗಿಸಲು ಪರಿಣಾಮಕಾರಿ ಮಾರ್ಗಸೂಚಿಗಳನ್ನು ರಚಿಸುವಲ್ಲಿ ಗಮನ ಹರಿಸಿದ್ದೇವೆ. ನಿಮ್ಮ ಹದಿಹರೆಯದ ಮಕ್ಕಳು ಎಂದಾದರೂ ಸುರಕ್ಷತಾ ಆತಂಕವನ್ನು ವ್ಯಕ್ತಪಡಿಸಿದರೆ, ಅವರು ಖಂಡಿತವಾಗಿಯೂ ನಮಗೆ ವರದಿ ಮಾಡಬೇಕು. ”**



# Snapchat ಬಳಸುವುದು ಹೇಗೆ
# ಪ್ರಮುಖ ವೈಶಿಷ್ಟ್ಯಗಳು

ಆ್ಯಪ್ ನ್ಯಾವಿಗೇಟ್ ಮಾಡುವುದರ ಬಗ್ಗೆ ನೀವು ಸಹಾಯ ಪಡೆಯಲು, ಈ ಕೆಳಗಿನ ಕೆಲವು Snapchat ಮೂಲಭೂತ ಅಂಶಗಳನ್ನು ನೋಡಿ. ವೈಶಿಷ್ಟ್ಯಗಳ ಸಂಪೂರ್ಣ ಪಟ್ಟಿಗಾಗಿ 12ನೇ ಪುಟದಲ್ಲಿನ ನಮ್ಮ Snap ಪದಕೋಶವನ್ನು ನೋಡಿ.

**ಮೊದಲಿಗೆ ಪ್ರಮುಖ ವಿಷಯ**: ಫೋಟೋ ಮತ್ತು ವೀಡಿಯೋ ಸಂದೇಶಗಳನ್ನು ಕಳುಹಿಸುವುದಕ್ಕಿಂತ ಹೆಚ್ಚಿನದು Snapchat ನಲ್ಲಿದೆ.  ಆ್ಯಪ್‌ನಲ್ಲಿ 5 ಟ್ಯಾಬ್‌ಗಳಿವೆ (ಎಡದಿಂದ ಬಲಕ್ಕೆ): Snap ಮ್ಯಾಪ್, ಚಾಟ್, ಕ್ಯಾಮೆರಾ, ಕಥೆಗಳು ಮತ್ತು ಸ್ಪಾಟ್‌ಲೈಟ್.




## Snap ಮ್ಯಾಪ್:

ನಮ್ಮ ಸಮುದಾಯವನ್ನು ಅವರ ಆತ್ಮೀಯ ಸ್ನೇಹಿತರೊಂದಿಗೆ ಸಂಪರ್ಕ ಹೊಂದಲು ಮತ್ತು ವಿಶ್ವದ ವಿವಿಧ ಸ್ಥಳಗಳೊಂದಿಗೆ ಸಂಪರ್ಕಹೊಂದಲು Snap ಮ್ಯಾಪ್ ಮಾಡುತ್ತದೆ. ನಮ್ಮ ಎಲ್ಲ ಉತ್ಪನ್ನಗಳಂತೆಯೇ, ಗೌಪ್ಯತೆಯನ್ನು ಪ್ರಮುಖವಾಗಿ ಗಮನದಲ್ಲಿರಿಸಿಕೊಂಡು Snap ಮ್ಯಾಪ್ ಅನ್ನು ವಿನ್ಯಾಸ ಮಾಡಲಾಗಿದೆ ಮತ್ತು ಎಲ್ಲ ಬಳಕೆದಾರರಿಗೆ ಡೀಫಾಲ್ಟ್ ಆಗಿ ಸ್ಥಳ ಹಂಚಿಕೆಯು ಆಫ್ ಆಗಿರುತ್ತದೆ. ಮೊದಲ ಬಾರಿಗೆ Snap ಮ್ಯಾಪ್ ಅನ್ನು Snapchatter ತೆರೆದಾಗ ಅವರು ತಮ್ಮ ಸ್ಥಳವನ್ನು ಯಾರೊಂದಿಗೆ ಹಂಚಿಕೊಳ್ಳಲು ಬಯಸುವವರು ಎಂಬುದನ್ನು ಆಯ್ಕೆ ಮಾಡಲು ಕೇಳಲಾಗುತ್ತದೆ. ಅಂದರೆ ಎಲ್ಲ ಸ್ನೇಹಿತರೊಂದಿಗೆ ಅಥವಾ ಕಸ್ಟಮೈಸ್ ಮಾಡಿದ ಕೆಲವರೊಂದಿಗೆ ಮಾತ್ರ ಹಂಚಿಕೊಳ್ಳಲು ಬಯಸುತ್ತೀರಾ ಅಥವಾ ಯಾರೊಂದಿಗೂ ಹಂಚಿಕೊಳ್ಳಲು (ಗೋಸ್ಟ್ ಮೋಡ್) ಬಯಸುವುದಿಲ್ಲವೇ ಎಂದು. Snap ಮ್ಯಾಪ್ ನಲ್ಲಿನ ಸ್ಥಳಗಳ ಮೂಲಕ Snapchatter ಗಳು ವ್ಯವಹಾರದ ಸಮಯವನ್ನು ಮತ್ತು ವಿಮರ್ಶೆಗಳನ್ನು ನೋಡಲು, ಟೇಕ್-ಔಟ್ ಅನ್ನು ಮತ್ತು ಡೆಲಿವರಿ ಆರ್ಡರ್‌ಗಳನ್ನು ಮಾಡಲು ಸಾಧ್ಯವಿರುತ್ತದೆ.



## ಚಾಟ್:


ಆರಂಭದಿಂದಲೂ ನಾವು ನಿಜವಾದ ಸ್ನೇಹಿತರು ದೂರವಿದ್ದಾಗ ಅವರನ್ನು ಸಂಪರ್ಕಿಸಲು ಸಹಾಯ ಮಾಡುವುದರ ಮತ್ತು ಆ ಕ್ಷಣದಲ್ಲಿ ತಮ್ಮನ್ನು ತಾವು ಅಭಿವ್ಯಕ್ತಿಗೊಳಿಸಲು ಹಿತಕರವಾದ ಭಾವ ಹೊಂದುವಂತೆ ಮಾಡುವುದರ ಮೇಲೆ ಗಮನ ಹರಿಸಿದ್ದೇವೆ. ವೀಡಿಯೋ, ಫೋಟೋ, ಆಡಿಯೋ ಮತ್ತು ಪಠ್ಯ ಚಾಟ್‌ಗಳಿಗೆ ಹಾಗೂ ಫೋನ್ ಮತ್ತು ವೀಡಿಯೋ ಕರೆಗಳಿಗೆ Snapchat ಅನುವು ಮಾಡಿಕೊಡುತ್ತದೆ. ಮೆಸೇಜ್‌ಗಳು ಡೀಫಾಲ್ಟ್ ಆಗಿ ಅಳಿಸಲ್ಪಡುತ್ತವೆ ಮತ್ತು ಈಗಾಗಲೇ ಸ್ನೇಹಿತರಲ್ಲದ ಯಾರಿಂದಲೂ ಬಳಕೆದಾರರು ಚಾಟ್ ಸ್ವೀಕರಿಸಲು ಸಾಧ್ಯವಿರುವುದಿಲ್ಲ.



## ಕ್ಯಾಮೆರಾ:

Snapchat ಸ್ವಯಂಚಾಲಿತವಾಗಿ ಕ್ಯಾಮೆರಾ ಆನ್ ಮಾಡುತ್ತದೆ. ಇಲ್ಲಿ ನೀವು ವೀಡಿಯೋಗಳು ಅಥವಾ ಫೋಟೋಗಳ ರೂಪದಲ್ಲಿ Snap ಗಳನ್ನು ಸೆರೆಹಿಡಿಯಬಹುದು. Snap ರಚಿಸಿದ ನಂತರ, ಕ್ರಿಯೇಟಿವ್ ಟೂಲ್ಸ್ ಆದ ಫಿಲ್ಟರ್ ಗಳು, ಪಠ್ಯಗಳು, ಸ್ಟಿಕ್ಕರ್‌ಗಳು, ಅಟ್ಯಾಚ್‌ಮೆಂಟ್‌ಗಳು ಮತ್ತು ಇನ್ನಷ್ಟನ್ನು ಅಳವಡಿಸಬಹುದು. ಒಂದು Snap ಅನ್ನು :

- ಚಾಟ್‌ನಲ್ಲಿ ಕಳುಹಿಸಬಹುದು
- ನೆನಪುಗಳಿಗೆ ಉಳಿಸಬಹುದು
- ನನ್ನ ಕಥೆಗೆ ಸೇರಿಸಬಹುದು ಅಥವಾ ಖಾಸಗೀ ಕಥೆ ಅಥವಾ ಕಸ್ಟಮ್ ಕಥೆಯನ್ನು ಸೃಷ್ಟಿಸಬಹುದು
- ಅಳಿಸಬಹುದು



Snap ಗಳು ಮತ್ತು ಚಾಟ್‌ಗಳನ್ನು Snapchat ಯಾವಾಗ ಅಳಿಸುತ್ತದೆ ಎಂಬ ಹೆಚ್ಚುವರಿ ಮಾಹಿತಿಗಾಗಿ, ಇಲ್ಲಿ ನಮ್ಮ ಬೆಂಬಲ ಲೇಖನಕ್ಕೆ ದಯವಿಟ್ಟು ಭೇಟಿ ನೀಡಿ. ಈ ನಿಯಮಗಳ ಬಗ್ಗೆ ಇನ್ನಷ್ಟನ್ನು ಪುಟ 12 ರಲ್ಲಿ ನೋಡಿ!

## ಕಥೆಗಳು:

ಇಲ್ಲಿ Snapchatter ಗಳು ತಮ್ಮ ಸ್ನೇಹಿತರು, ಕ್ರಿಯೇಟರ್‌ಗಳು ಮತ್ತು ವಿಶಾಲ Snapchat ಸಮುದಾಯದ ಕಥೆಗಳನ್ನು ವೀಕ್ಷಿಸಬಹುದು! ಇಲ್ಲಿ ನೀವು Discover ಮತ್ತು "ನಿಮಗಾಗಿ" ಆಯ್ಕೆಯಿಂದ ಚಂದಾದಾರಿಕೆಗಳನ್ನು ನೋಡಬಹುದು ಮತ್ತು ವೀಕ್ಷಿಸಬಹುದು.


## ಸ್ಪಾಟ್‌ಲೈಟ್:


Snapchat ಕಮ್ಯುನಿಟಿ ಸೃಷ್ಟಿಸಿದ ಅತ್ಯಂತ ಮನರಂಜನೆಯ Snap ಗಳ ಮೇಲೆ ಸ್ಪಾಟ್‌ಲೈಟ್ ಬೆಳಕು ಚೆಲ್ಲುತ್ತದೆ. ಕಂಟೆಂಟ್‌ನಿಂದ ಕಂಟೆಂಟ್‌ಗೆ ಹೋಗಲು ಮೇಲಕ್ಕೆ ಮತ್ತು ಕೆಳಕ್ಕೆ ಸ್ವೈಪ್ ಮಾಡುವ ಮೂಲಕ ಹುಡುಕಿ. ಒಂದು ವೇಳೆ ನೀವು ಇನ್ನಷ್ಟು ನೋಡಲು ಬಯಸುವ ಯಾವುದನ್ನಾದರೂ ಕಂಡರೆ, ಅದನ್ನು ಮೆಚ್ಚಿನದಾಗಿ ಮಾಡಲು ಹಾರ್ಟ್ ಅನ್ನು ಟ್ಯಾಪ್ ಮಾಡಿ ಮತ್ತು ನಿಮ್ಮ ಫೀಡ್ ಅನ್ನು ವೈಯಕ್ತಿಕಗೊಳಿಸಿ!



# Snapchat ನಲ್ಲಿ ಗೌಪ್ಯತೆ

## ನಮ್ಮ ಗೌಪ್ಯತೆ ಸಿದ್ಧಾಂತಗಳು





Snap ನಲ್ಲಿ, ನಿಮ್ಮ ಗೌಪ್ಯತೆಯು ನಮ್ಮ ಪ್ರಾಮುಖ್ಯತೆಯಾಗಿದೆ. ಪ್ರತಿ ಬಾರಿ ನೀವು Snapchat ಅನ್ನು ಅಥವಾ ನಮ್ಮ ಯಾವುದೇ ಉತ್ಪನ್ನಗಳನ್ನು ಬಳಸಿದಾಗಲೂ ನಿಮ್ಮ ವಿಶ್ವಾಸಾರ್ಹತೆಯನ್ನು ನಾವು ಗಳಿಸುತ್ತೇವೆ ಎಂಬುದನ್ನು ನಾವು ಅರಿತಿದ್ದೇವೆ. ಇದೇ ಕಾರಣಕ್ಕೆ, ಬಹುತೇಕ ಇತರ ತಂತ್ರಜ್ಞಾನ ಕಂಪನಿಗಳಿಗಿಂತ ಹೆಚ್ಚು ವಿಭಿನ್ನವಾದ ರೀತಿಯಲ್ಲಿ ನಿಮ್ಮ ಮಾಹಿತಿಯನ್ನು ನಾವು ನೋಡಿಕೊಳ್ಳುತ್ತೇವೆ.

ನಮ್ಮ ಉತ್ಪನ್ನಗಳು ನಿರಂತರವಾಗಿ ಸುಧಾರಿಸುತ್ತಿದ್ದರೂ, ನಮ್ಮ ಗೌಪ್ಯತೆಯ ಸಿದ್ಧಾಂತವು ಬದಲಾಗುವುದಿಲ್ಲ:

- ನಾವು ಪ್ರಾಮಾಣಿಕವಾಗಿ ಮತ್ತು ಮುಕ್ತವಾಗಿ ಸಂವಹನ ನಡೆಸುತ್ತೇವೆ
- ನಿಮ್ಮನ್ನು ನೀವು ಹೇಗೆ ಅಭಿವ್ಯಕ್ತಪಡಿಸಿಕೊಳ್ಳಬೇಕು ಎಂದು ನೀವು ಆಯ್ಕೆ ಮಾಡಿಕೊಳ್ಳಿ
- ಗೌಪ್ಯತೆಯನ್ನು ಗಮನದಲ್ಲಿಟ್ಟುಕೊಂಡು ನಾವು ವಿನ್ಯಾಸ ಮಾಡುತ್ತೇವೆ
- ನಿಮ್ಮ ಮಾಹಿತಿಯನ್ನು ನೀವು ನಿಯಂತ್ರಿಸುತ್ತೀರಿ

ನಿಮ್ಮ ಗೌಪ್ಯತೆಯನ್ನು ನಾವು ಹೇಗೆ ಪ್ರಮುಖ ಆದ್ಯತೆಯನ್ನಾಗಿಸುತ್ತೇವೆ ಎಂಬ ಬಗ್ಗೆ ತಿಳಿಯಲು, ನಮ್ಮ ಗೌಪ್ಯತೆ ಕೇಂದ್ರವನ್ನು ನೋಡಿ. ಇಲ್ಲಿ ನೀವು, ನಮ್ಮ ಗೌಪ್ಯತೆ ನೀತಿಗಳು, ನಮ್ಮ ಗೌಪ್ಯತೆ ನೀತಿ ಬಗ್ಗೆ ಇನ್ನಷ್ಟು ವಿವರಗಳನ್ನು ಕಂಡುಕೊಳ್ಳುತ್ತೀರಿ ಮತ್ತು ಪ್ರಮುಖ ವಿಷಯಗಳ ಸಾರಾಂಶವನ್ನು ನೀವು ಎದುರು ನೋಡುತ್ತೀರಿ ಎಂದಾದರೆ, ನಿಮ್ಮ ಗೌಪ್ಯತೆ ವಿವರಿಸಲಾಗಿದೆ ಎಂಬುದನ್ನು ದಯವಿಟ್ಟು ಪರಾಮರ್ಶಿಸಿ.

# Snapchat ನಲ್ಲಿ ಸುರಕ್ಷಿತವಾಗಿರುವುದು ಸಹಾಯಕ ಸುರಕ್ಷತೆ ಸಲಹೆಗಳು

ಸ್ನೇಹಿತರು ಮತ್ತು ಪ್ರೀತಿಪಾತ್ರರೊಂದಿಗೆ ಸಂಪರ್ಕಿಸಲು ಮತ್ತು ಸಂವಹನ ನಡೆಸಲು Snapchat ಒಂದು ಸ್ಥಳವಾಗಿದೆ. ಆದರೆ, ಸುರಕ್ಷಿತವಾಗಿರುವುದು ಹೇಗೆ ಎಂದೂ ತಿಳಿಯುವುದು ಪ್ರಮುಖವಾಗಿದೆ. ನಮ್ಮ ನೀತಿಗಳು, ನಮ್ಮ ತಂಡ, ಮತ್ತು ಪಾಲಕರು ಮತ್ತು ಬೋಧಕರಿಗೆ ಮಾಹಿತಿಯ ಬಗ್ಗೆ ಇನ್ನಷ್ಟು ತಿಳಿಯಲು ನಮ್ಮ ಸುರಕ್ಷತಾ ಕೇಂದ್ರವನ್ನು ಪರಿಶೀಲಿಸುವಂತೆ ನಾವು ಶಿಫಾರಸು ಮಾಡುತ್ತೇವೆ. ಗಮನವಿರಲಿ, Snapchat 13 ವರ್ಷಗಳಿಗಿಂತ ಮೀರಿದವರಿಗಾಗಿ ಇದೆ.

ಮಾನಸಿಕ ಆರೋಗ್ಯ ಅಥವಾ ಭಾವನಾತ್ಮಕ ಸಂಕಷ್ಟವನ್ನು ಅನುಭವಿಸುತ್ತಿರಬಹುದಾದ ಅಥವಾ ಈ ಸಮಸ್ಯೆಗಳ ಬಗ್ಗೆ ಹೆಚ್ಚು ತಿಳಿದುಕೊಳ್ಳಲು ಮತ್ತು ಇಂತಹ ಸಮಸ್ಯೆಯನ್ನು ಎದುರಿಸುತ್ತಿರುವ ಸ್ನೇಹಿತರಿಗೆ ತಾವು ಹೇಗೆ ಸಹಾಯ ಮಾಡಬಹುದು ಎಂಬುದನ್ನು ತಿಳಿದುಕೊಳ್ಳಲು ಕುತೂಹಲ ಹೊಂದಿರುವ Snapchatter ಗಳಿಗೂ ನಾವು ಆ್ಯಪ್ ಒಳಗೆ ಬೆಂಬಲವನ್ನು ಒದಗಿಸುತ್ತೇವೆ. ಉದ್ವೇಗ, ಖಿನ್ನತೆ, ಒತ್ತಡ, ದುಃಖ, ಆತ್ಮಹತ್ಯಾತ್ಮಕ ಚಿಂತನೆಗಳು ಮತ್ತು ಬೆದರಿಕೆಯಂತಹ ಸಮಸ್ಯೆಯೂ ಸೇರಿದಂತೆ ಕೆಲವು ವಿಷಯಗಳಿಗಾಗಿ Snapchatter ಗಳು ಹುಡುಕುತ್ತಿದ್ದಾಗ Here For You ಎಂಬ ಪರಿಕರವು ಪರಿಣಿತರು ಅಭಿವೃದ್ಧಿಪಡಿಸಿದ ಸುರಕ್ಷತಾ ಸಂಪನ್ಮೂಲಗಳನ್ನು ಒದಗಿಸುತ್ತದೆ.

Snapchat ನಲ್ಲಿ ಸುರಕ್ಷಿತವಾಗಿ ಇರಲು ಇಲ್ಲಿ ಕೆಲವು ಸಲಹೆಗಳಿವೆ!

**1 ಸುಭದ್ರ ಪಾಸ್‌ವರ್ಡ್ ಆಯ್ಕೆ ಮಾಡಿಕೊಳ್ಳಿ**: ಕನಿಷ್ಠ 8 ಅಕ್ಷರಗಳಷ್ಟು ಉದ್ದವಿರುವ ಪಾಸ್‌ವರ್ಡ್ ಆಯ್ಕೆ ಮಾಡಿ ಮತ್ತು ವೈಯಕ್ತಿಕ ಮಾಹಿತಿಯಾದ ನಿಮ್ಮ ಹೆಸರು, ಬಳಕೆದಾರರ ಹೆಸರು, ಫೋನ್ ಸಂಖ್ಯೆ ಅಥವಾ ಜನ್ಮ ದಿನವನ್ನು ಸೇರಿಸಬೇಡಿ. ಸಂಖ್ಯೆಗಳು, ಚಿಹ್ನೆಗಳು ಮತ್ತು ಕ್ಯಾಪಿಟಲ್ ಮತ್ತು ಲೋವರ್‌ಕೇಸ್ ಅಕ್ಷರಗಳನ್ನು ನಿಮ್ಮ ಪಾಸ್‌ವರ್ಡ್‌ನಲ್ಲಿ ಸೇರಿಸಿ. ಇತರರೊಂದಿಗೆ ನಿಮ್ಮ ಪಾಸ್‌ವರ್ಡ್ ಹಂಚಿಕೊಳ್ಳಬೇಡಿ ಮತ್ತು ಇತರ ಆ್ಯಪ್‌ಗಳಿಗೆ ಅಥವಾ ವೆಬ್‌ಸೈಟ್‌ಗಳಿಗೆ ಅದೇ ಪಾಸ್‌ವರ್ಡ್ ಬಳಸಬೇಡಿ.

**2 ನಿಮ್ಮ ಇಮೇಲ್ ಮತ್ತು ಮೊಬೈಲ್ ಸಂಖ್ಯೆಯನ್ನು ಪರಿಶೀಲಿಸಿ**: ನಿಮ್ಮ ಖಾತೆಯೊಂದಿಗೆ ಸಂಬಂಧ ಹೊಂದಿರುವ ಇಮೇಲ್ ವಿಳಾಸ ಮತ್ತು ಮೊಬೈಲ್ ಸಂಖ್ಯೆಯು Snapchat ಸೆಟ್ಟಿಂಗ್ಸ್‌ನಲ್ಲಿ ನಿಖರವಾಗಿದೆಯೇ ಎಂದು ಪರಿಶೀಲಿಸಿ.

**3 ಎರಡು-ಅಂಶಗಳ ದೃಢೀಕರಣವನ್ನು ಸೆಟಪ್ ಮಾಡಿ**: ನಿಮ್ಮ Snapchat ಅಕೌಂಟ್‌ಗೆ ನೀವು ಲಾಗಿನ್ ಮಾಡುವಾಗ ಇದು ನಿಜವಾಗಿಯೂ ನೀವೇ ಎಂಬುದನ್ನು ಪರಿಶೀಲಿಸಲು ಐಚ್ಛಿಕ ಭದ್ರತಾ ಸೌಲಭ್ಯ ಇದಾಗಿದೆ! ಇದು ನಿಮ್ಮ ಖಾತೆಯನ್ನು ಇನ್ನಷ್ಟು ಸುರಕ್ಷಿತವಾಗಿಸುತ್ತದೆ. ಇಲ್ಲಿ ಇನ್ನಷ್ಟು ತಿಳಿಯಿರಿ.

**4 ಪರಸ್ಪರ ಸ್ನೇಹಿತರ ನಡುವೆಯೇ ಇರಲಿ**: ನಿಮ್ಮ ಆತ್ಮೀಯ ಸ್ನೇಹಿತರೊಂದಿಗೆ ಸಂಪರ್ಕದಲ್ಲಿರಲು Snapchat ಅನ್ನು ರೂಪಿಸಲಾಗಿದೆ. ನಿಜ ಜೀವನದಲ್ಲಿ ನಿಮಗೆ ತಿಳಿದಿರುವವರೊಂದಿಗೆ ಮಾತ್ರ ಸ್ನೇಹಿತರಾಗಿ ಅಥವಾ ಅಂತಹವರ ಫ್ರೆಂಡ್ ಕೋರಿಕೆಗಳನ್ನು ಮಾತ್ರ ಸಮ್ಮತಿಸಿ ಎಂದು ನಾವು ಶಿಫಾರಸು ಮಾಡುತ್ತೇವೆ. ಆನ್‌ಲೈನ್‌ನಲ್ಲಿ ಕಾಣಿಸಿಕೊಳ್ಳುವ ವ್ಯಕ್ತಿಯೊಂದಿಗೆ ಭೇಟಿ ಮಾಡುವುದು ಸುರಕ್ಷಿತವಲ್ಲ ಎಂಬುದನ್ನು ನಿಮ್ಮ ಹದಿಹರೆಯದ ಮಕ್ಕಳಿಗೆ ನೆನಪಿಸಿ!

**5 ನಿಮ್ಮ ಗೌಪ್ಯತೆ ಸೆಟ್ಟಿಂಗ್‌ಗಳನ್ನು ಪರಿಶೀಲಿಸಿ**: ನಿಮಗೆ ಯಾರು Snaps ಕಳುಹಿಸಬಹುದು, ನಿಮ್ಮ ಕಥೆಗಳನ್ನು ಯಾರು ವೀಕ್ಷಿಸಬಹುದು ಅಥವಾ ಯಾರು ನಿಮ್ಮ ಸ್ಥಳವನ್ನು Snap ಮ್ಯಾಪ್‌ನಲ್ಲಿ ಯಾರು ನೋಡಬಹುದು ಎಂಬುದನ್ನು ಸೆಟ್ಟಿಂಗ್‌ಗಳಲ್ಲಿ ಆಯ್ಕೆ ಮಾಡಿ. ಡೀಫಾಲ್ಟ್ ಆಗಿ, ಕೇವಲ ನಿಮ್ಮ ಸ್ನೇಹಿತರು ಮಾತ್ರ ನಿಮ್ಮನ್ನು ನೇರವಾಗಿ ಸಂಪರ್ಕಿಸಬಹುದು ಅಥವಾ ನಿಮ್ಮ ಕಥೆಯನ್ನು ನೋಡಬಹುದು.

**6 ಮ್ಯಾಪ್‌ನಲ್ಲಿ ನಿಮ್ಮ ಸ್ಥಳವನ್ನು ಕಸ್ಟಮೈಸ್ ಮಾಡಿ**: ನೀವು ಪುನಃ ಸೇರಿಸಿರುವ ನಿಮ್ಮ ಎಲ್ಲ ಸ್ನೇಹಿತರೊಂದಿಗೆ, ಆಯ್ದ ಸ್ನೇಹಿತರ ಸಮೂಹಕ್ಕೆ ಮಾತ್ರ ನಿಮ್ಮ ಸ್ಥಳವನ್ನು ಹಂಚಿಕೊಳ್ಳಲು ಆಯ್ಕೆ ಮಾಡಿಕೊಳ್ಳಬಹುದು ಅಥವಾ ಜಾಲದಿಂದ ಹೊರ ಹೋಗಲು ಬಯಸಿದಾಗ ಗೋಸ್ಟ್ ಮೋಡ್ ಅನ್ನು ಕೂಡಾ ನೀವು ಆನ್ ಮಾಡಬಹುದು. ಆ್ಯಪ್ ಅನ್ನು ನೀವು ಬಳಸುತ್ತಿರುವಾಗ ಮಾತ್ರ ನಿಮ್ಮ ಸ್ಥಳವನ್ನು Snap ಮ್ಯಾಪ್ ಅಪ್‌ಡೇಟ್ ಮಾಡುತ್ತದೆ ಮತ್ತು ನೀವು ಹಂಚಿಕೊಳ್ಳಲು ಆಯ್ಕೆ ಮಾಡಿದ ಜನರೊಂದಿಗೆ ಮಾತ್ರ ನಿಮ್ಮ ಸ್ಥಳವನ್ನು ಹಂಚಿಕೊಳ್ಳುತ್ತದೆ!

**7 ನನ್ನ ಕಥೆಯನ್ನು ಯಾರು ವೀಕ್ಷಿಸಬಹುದು ಎಂಬುದನ್ನು ಬದಲಿಸಿ:** ಡೀಫಾಲ್ಟ್ ಖಾಸಗಿ ಸೆಟ್ಟಿಂಗ್‌ನಲ್ಲಿ, ನೀವು ಸೇರಿಸಿದ Snapchatter ಗಳು ಮಾತ್ರ ನಿಮ್ಮ ಕಥೆಯನ್ನು ವೀಕ್ಷಿಸಬಹುದು. ನಿಮ್ಮ ಕಥೆಗೆ ನೀವು ಪೋಸ್ಟ್ ಮಾಡುವ Snap ಗೆ ಗೌಪ್ಯತೆ ಸೆಟ್ಟಿಂಗ್‌ಗಳು ಆ Snap ಗೆ ಮಾತ್ರ ಇರುತ್ತದೆ. ನಂತರ ಸೆಟ್ಟಿಂಗ್ಸ್ ಅನ್ನು ಬದಲಿಸಿದರೂ ಇದು ಬದಲಾಗುವುದಿಲ್ಲ.

**8 Snapchat ನಲ್ಲಿ ದೌರ್ಜನ್ಯದ ಬಗ್ಗೆ ವರದಿ ಮಾಡಿ**: ಕಿರುಕುಳ, ಬೆದರಿಕೆ ಅಥವಾ ಯಾವುದೇ ಇತರ ಸುರಕ್ಷತಾ ಕಳವಳವೂ ಸೇರಿದಂತೆ Snapchat ನಲ್ಲಿ ಎಂದಿಗೂ ನೀವು ದೌರ್ಜನ್ಯದ ವರದಿ ಮಾಡಬಹುದು. ಯಾರಾದರೂ ನಿಮಗೆ ಅಹಿತಕರ ಭಾವವನ್ನು ಮೂಡಿಸಿದರೆ, ಆ Snapchatter ಅನ್ನು ನೀವು ನಿರ್ಬಂಧಿಸಬಹುದು ಮತ್ತು ಯಾವುದೇ ಗ್ರೂಪ್ ಚಾಟ್ ಅನ್ನು ತೊರೆಯಬಹುದು. ವರದಿ ಮಾಡಲು, Snap ಅಥವಾ ಕಥೆಯನ್ನು ಒತ್ತಿ ಹಿಡಿದಿರಿ ಮತ್ತು "Snap ವರದಿ ಮಾಡಿ" ಬಟನ್ ಆಯ್ಕೆ ಮಾಡಿ.

**9 ಸ್ನೇಹಿತರನ್ನು ತೆಗೆದುಹಾಕುವುದು ಮತ್ತು ನಿರ್ಬಂಧಿಸುವುದರ ಮಧ್ಯದ ವ್ಯತ್ಯಾಸ**: ನಿಮ್ಮ ಸ್ನೇಹಿತರ ಪಟ್ಟಿಯಿಂದ ನೀವು ಯಾರನ್ನಾದರೂ ತೆಗೆದುಹಾಕಿದರೆ, ನಿಮ್ಮ ಯಾವುದೇ ಖಾಸಗಿ ಕಥೆಗಳನ್ನು ವೀಕ್ಷಿಸಲು ಅವರಿಗೆ ಸಾಧ್ಯವಾಗುವುದಿಲ್ಲ. ಆದರೆ, ನೀವು ಸಾರ್ವಜನಿಕವಾಗಿ ಕಳುಹಿಸಿದ ಯಾವುದೇ ಕಂಟೆಂಟ್ ಅನ್ನು ಅವರು ವೀಕ್ಷಿಸಬಹುದಾಗಿದೆ. ನಿಮ್ಮ ಗೌಪ್ಯತೆ ಸೆಟ್ಟಿಂಗ್‌ಗಳನ್ನು ಆಧರಿಸಿ, ಅವರಿಗೆ ಆಗಲೂ ನಿಮ್ಮೊಂದಿಗೆ ಚಾಟ್ ಅಥವಾ Snap ಮಾಡಲು ಸಾಧ್ಯವಾಗಬಹುದು. ಒಬ್ಬ ಸ್ನೇಹಿತನನ್ನು ನೀವು ನಿರ್ಬಂಧಿಸಿದಾಗ, ಅವರಿಗೆ ನಿಮ್ಮ ಕಥೆ ನೋಡಲು, ನಿಮಗೆ Snap ಗಳನ್ನು ಕಳುಹಿಸಲು, ಅಥವಾ ನಿಮಗೆ ಚಾಟ್‌ಗಳನ್ನು ಕಳುಹಿಸಲು ಸಾಧ್ಯವಾಗುವುದಿಲ್ಲ.



# ನಿಮ್ಮನ್ನು ನಾವು ಗಮನದಲ್ಲಿರಿಸಿಕೊಂಡಿದ್ದೇವೆ

# ಸೌಖ್ಯ ಸಂಪನ್ಮೂಲಗಳು


ತನ್ನ ಸಮುದಾಯದ ಸುರಕ್ಷತೆ ಮತ್ತು ಸೌಖ್ಯಕ್ಕೆ Snap ಅತ್ಯಂತ ಬದ್ಧವಾಗಿದೆ. ನಮ್ಮ Snapchatter ಗಳನ್ನು ಸುರಕ್ಷಿತ, ಆರೋಗ್ಯಕರ ಮತ್ತು ಮಾಹಿತಿಪೂರ್ಣವಾಗಿಡಲು ನಾವು ತಂಡಗಳು, ತಂತ್ರಜ್ಞಾನಗಳು, ನೀತಿಗಳು ಮತ್ತು ಪಾಲುದಾರಿಕೆಗಳನ್ನು ನಿಯೋಜಿಸಿಕೊಳ್ಳುತ್ತೇವೆ.

Snapchatter ಗಳಿಗೆ ಸಂಪನ್ಮೂಲಗಳನ್ನು ಒದಗಿಸಲು ಮತ್ತು ಬೆಂಬಲಿಸಲು ಉದ್ಯಮದ ಪರಿಣಿತರು ಮತ್ತು ಸರ್ಕಾರೇತರ ಏಜೆನ್ಸಿಗಳೊಂದಿಗೆ ಕೆಲಸ ಮಾಡುತ್ತೇವೆ. ನಮ್ಮ ಸುರಕ್ಷತೆ ಪಾಲುದಾರರ ಸಂಪೂರ್ಣ ಪಟ್ಟಿಗಾಗಿ, ನಮ್ಮ ಸುರಕ್ಷತಾ ಪಾಲುದಾರರು ಅನ್ನು ನೋಡಿ.


ನಿಮ್ಮ ಹದಿಹರೆಯದ ಮಕ್ಕಳು ಭಾವನಾತ್ಮಕ ಬೆಂಬಲವನ್ನು ಬಯಸಿದ್ದರೆ ಅಥವಾ ಕೇವಲ ಸರಳವಾಗಿ ಚಾಟ್ ಮಾಡಲು ಬಯಸಿದ್ದರೂ ಬೆಂಬಲ ನೀಡುವುದಕ್ಕೆ ಸಹಾಯ ಮಾಡಲು ಆ್ಯಪ್ ಒಳಗೆ ಸಂಪನ್ಮೂಲಗಳು ಮತ್ತು ಸೌಖ್ಯದ ವೈಶಿಷ್ಟ್ಯಗಳನ್ನು Snapchat ಒದಗಿಸುತ್ತದೆ! ಮಾನಸಿಕ ಆರೋಗ್ಯ ಸಮಸ್ಯೆಯನ್ನು ಸ್ವತಃ ಎದುರಿಸುತ್ತಿರಬಹುದಾದ ಸ್ನೇಹಿತರಿಗೆ ಬೆಂಬಲ ನೀಡಲು Snapchat ಸಮುದಾಯದ ಸದಸ್ಯರನ್ನು ಸುಶಿಕ್ಷಿತಗೊಳಿಸಲು ಮತ್ತು ಸಬಲಗೊಳಿಸಲು ನಮ್ಮ ಸೌಖ್ಯ ವೈಶಿಷ್ಟ್ಯಗಳನ್ನು ವಿನ್ಯಾಸ ಮಾಡಲಾಗಿದೆ.

**ಕ್ರೈಸಿಸ್ ಟೆಕ್ಸ್ಟ್ ಲೈನ್**: ಕ್ರೈಸಿಸ್ ಟೆಕ್ಸ್ಟ್ ಲೈನ್ ಜತೆಗೆ ನಮ್ಮ ಪಾಲುದಾರಿಕೆಯು, ಯುಎಸ್‌ನಲ್ಲಿರುವವರು ಉಚಿತವಾಗಿ 24/7 ಲಭ್ಯವಿರುವ ತರಬೇತಿ ಹೊಂದಿರುವ ಆಪ್ತ ಸಲಹೆಗಾರರೊಂದಿಗೆ ಲೈವ್ ಆಗಿ ಚಾಟ್ ಮಾಡಲು Snapchatter ಗಳಿಗೆ ಅನುವು ಮಾಡುತ್ತದೆ. **KIND ಎಂದು 741741** ಗೆ ಪಠ್ಯ ಕಳುಹಿಸಿ ಅಥವಾ ಆ್ಯಪ್ ಒಳಗೆ ಕ್ರೈಸಿಸ್ ಟೆಕ್ಸ್ಟ್ ಲೈನ್ ಎಂದು ಹುಡುಕಿ! ನೀವು ಯುಎಸ್ ಹೊರಗೆ ಇದ್ದರೆ, ಹೆಚ್ಚಿನ ಮಾಹಿತಿಗಾಗಿ ನಮ್ಮ ಸುರಕ್ಷತೆ ಸಂಪನ್ಮೂಲಗಳು ಅನ್ನು ಪರಿಶೀಲಿಸಿ.

CRISIS TEXT LINE |




**ಹೆಡ್‌ಸ್ಪೇಸ್ ಮಿನಿ**: ಆ್ಯಪ್ ಒಳಗೆ ಮಾರ್ಗದರ್ಶನ ಸಹಿತ ಧ್ಯಾನ ಮತ್ತು ಸಾವಧಾನತೆ ಅಭ್ಯಾಸಗಳನ್ನು Snapchatter ಗಳಿಗೆ ಒದಗಿಸಲು ಹೆಡ್‌ಸ್ಪೇಸ್ ಮತ್ತು Snap ಪಾಲುದಾರಿಕೆ ಹೊಂದಿದೆ. ಹೆಡ್‌ಸ್ಪೇಸ್ ಮಿನಿ ಮೂಲಕ, ಸ್ನೇಹಿತರೊಂದಿಗೆ ಧ್ಯಾನ ಅಭ್ಯಾಸಗಳನ್ನು Snapchatter ಗಳು ಮಾಡಬಹುದಾಗಿದೆ ಮತ್ತು ಅಗತ್ಯವಿರುವ ಸ್ನೇಹಿತರಲ್ಲಿ ಧನಾತ್ಮಕತೆಯನ್ನು ಹೆಚ್ಚಿಸಲು ಪ್ರೋತ್ಸಾಹಕರ ಸಂದೇಶಗಳನ್ನು ಕಳುಹಿಸಬಹುದು. ಗಮನಿಸಿ, ಈ ವೈಶಿಷ್ಟ್ಯವು ಕೆಲವೇ ದೇಶಗಳಲ್ಲಿ ಮಾತ್ರ ಲಭ್ಯವಿದೆ.




**Here For You**: ವಿಪತ್ತಿನಲ್ಲಿರುವವರು ಸಂಬಂಧಿಸಿದ ಶಬ್ದಗಳನ್ನು ಜನರು ಟೈಪ್ ಮಾಡಿದಾಗ ತೋರಿಸುವ, ವೃತ್ತಿಪರ ಲಾಭೋದ್ದೇಶವಿಲ್ಲದ ಸಂಸ್ಥೆಗಳಿಂದ ಸ್ಥಳೀಯಗೊಳಿಸಿದ ಸಂಪನ್ಮೂಲಗಳು ಮತ್ತು ಕಂಟೆಂಟ್ ಅನ್ನು ಹುಡುಕಾಟದಲ್ಲಿನ ಈ ಪರಿಕರವು ಒಳಗೊಂಡಿರುತ್ತದೆ. ಹುಡುಕಾಟ ವಿಷಯದಲ್ಲಿ ಖಿನ್ನತೆ, ಉದ್ವೇಗ, ಬೇಸರ, ಬೆದರಿಸುವ,, ದೇಹದ ಧನಾತ್ಮಕತೆ, ಎಲ್‌ಜಿಬಿಟಿಕ್ಯೂ ಮಾನಸಿಕ ಆರೋಗ್ಯ ಹಾಗೂ ಇತರೆ ಒಳಗೊಂಡಿವೆ.

**ಆ್ಯಪ್ ಒಳಗಿನ ವರದಿ ಮಾಡುವಿಕೆ**: ನಮ್ಮ ಆ್ಯಪ್ ಒಳಗಿನ ವರದಿ ಮಾಡುವಿಕೆ ಪರಿಕರವು, ತಮ್ಮ ಸ್ನೇಹಿತರು ಸ್ವಯಂ ಅಪಾಯ ಮಾಡಿಕೊಳ್ಳುವ ಅಪಾಯ ಹೊಂದಿದ್ದಾರೆ ಎಂದು Snapchatter ಗಳು ಚಿಂತಿಸಿದಾಗ ಅನಾಮಿಕವಾಗಿ ನಮಗೆ ಎಚ್ಚರಿಕೆ ನೀಡಲು ಅನುವು ಮಾಡುತ್ತದೆ. ಸನ್ನಿವೇಶದ ಕುರಿತು Snap ಗೆ ಎಚ್ಚರಿಕೆ ನೀಡುವ ವ್ಯಕ್ತಿ ಮತ್ತು ಆ್ಯಪ್ ಒಳಗೆ ಬೆಂಬಲ ಪಡೆಯುತ್ತಿರುವ ವ್ಯಕ್ತಿ ಇಬ್ಬರಿಗೂ 20 ಕ್ಕೂ ಹೆಚ್ಚು ದೇಶಗಳು ಮತ್ತು ಭಾಷೆಗಳಲ್ಲಿನ ಸ್ವಯಂ ಹಾನಿ ಮತ್ತು ವಿಪತ್ತು ಹಾಟ್‌ಲೈನ್ ಸಂಪನ್ಮೂಲಗಳನ್ನು ಹೊಂದಿರುವ ಗ್ರಾಹಕ ಸೇವಾ ಸೈಟ್ ಪುಟದಲ್ಲಿನ ಸಂಪನ್ಮೂಲಗಳನ್ನೂ ಕೂಡಾ ನಾವು ಹಂಚಿಕೊಳ್ಳುತ್ತೇವೆ.

2017 ರಲ್ಲಿ ನಾವು ನಮ್ಮ ಕಮ್ಯುನಿಟಿಯ ಸದಸ್ಯರಿಗಾಗಿ ಆ್ಯಪ್‌ನೊಳಗಿನ ಬಿಕ್ಕಟ್ಟು ಸಂಪನ್ಮೂಲಗಳನ್ನು ಆರಂಭಿಸಿದೆವು. ಈ ಸಹಾಯವು Snapchat ಸಪೋರ್ಟ್ ಪರವಾಗಿ ಸಂದೇಶದ ರೂಪದಲ್ಲಿ ಕಾಣಿಸುತ್ತದೆ. ಜೀವಕ್ಕೆ ತಕ್ಷಣದ ಅಪಾಯವಿದೆ ಎಂದು ಉತ್ತಮ ಭಾವದಲ್ಲಿ ನಾವು ಭಾವಿಸಿದಾಗ ಕಾನೂನು ಜಾರಿ ದಳವನ್ನು ನಮ್ಮ ಕಾನೂನು ಜಾರಿ ಕಾರ್ಯನಿರ್ವಹಣೆಗಳ ತಂಡವು ಸಕ್ರಿಯವಾಗಿ ಸಂಪರ್ಕಿಸುತ್ತದೆ. Snapchat ವೃತ್ತಿಪರವಾದ ಮಾನಸಿಕ ಆರೋಗ್ಯ ಸಹಾಯಕ ಸಂಪನ್ಮೂಲವಲ್ಲ. ಸ್ನೇಹಿತರು ಅಥವಾ ಪ್ರೀತಪಾತ್ರರು ಅಪಾಯದಲ್ಲಿದ್ದಾಗ, ಆತ್ಮಹತ್ಯೆ ತಡೆ ಹಾಟ್‌ಲೈಟ್, ಕ್ರೈಸಿಸ್ ಟೆಕ್ಸ್ಟ್ ಲೈನ್ ಅಥವಾ 911 ಕ್ಕೆ ಕರೆ ಮಾಡುವಂತಹ ತುರ್ತು ಸೇವೆಗಳನ್ನು ಬಳಸುವುದು.

**ಸುರಕ್ಷತಾ Snapshot Discover ಚಾನೆಲ್**: ಸುರಕ್ಷತಾ Snapshot ಗೆ ಚಂದಾದಾರರಾಗುವಂತೆ ನಿಮ್ಮ ಹದಿಹರೆಯದ ಮಕ್ಕಳಿಗೆ ಪ್ರೋತ್ಸಾಹಿಸಿ. ಇದು ಒಂದು Discover ಪ್ರದರ್ಶನವಾಗಿದ್ದು, ಡಿಜಿಟಲ್ ಸುರಕ್ಷತೆ ಮತ್ತು ನಿಮ್ಮ Snapchat ಅಕೌಂಟ್ ಅನ್ನು ಸುರಕ್ಷಿತವಾಗಿಡುವ ಪ್ರಮುಖ ವಿಧಾನಗಳ ಬಗ್ಗೆ ಸುಶಿಕ್ಷಿತಗೊಳಿಸಲು ಗಮನ ಹರಿಸುತ್ತದೆ! ಗಮನಿಸಿ, ಈ ಚಾನೆಲ್ ಆಯ್ದ ದೇಶಗಳಲ್ಲಿ ಮಾತ್ರ ಲಭ್ಯವಿದೆ.

**ಸಂಪನ್ಮೂಲ ಪುಟ**: ನಿಮ್ಮ ಮತ್ತು ನಿಮ್ಮ ಹದಿಹರೆಯದ ಮಕ್ಕಳ ಸುರಕ್ಷತಾ ಪಾಲುದಾರರು ಮತ್ತು ಸಂಪನ್ಮೂಲಗಳ ಪಟ್ಟಿಗಾಗಿ ನಮ್ಮ ಸುರಕ್ಷತಾ ಕೇಂದ್ರ ಅನ್ನು ನೋಡಿ!

**ಸ್ಕ್ಯಾನ್ ಮಾಡಲು ಆ್ಯಪ್ ಒಳಗೆ ಟ್ಯಾಪ್ ಮಾಡಿ ಮತ್ತು ಹೋಲ್ಡ್ ಮಾಡಿ**

# ನಿಮ್ಮ ಹದಿಹರೆಯದವರೊಂದಿಗೆ ಮಾತನಾಡುವುದು ಹೇಗೆ

# ಸಂವಾದ ಆರಂಭಿಸುವ ಅಂಶಗಳು

Snapchat ಬಳಕೆಯ ಬಗ್ಗೆ ನಿಮ್ಮ ಹದಿಹರೆಯದವರೊಂದಿಗೆ ಸಂವಹನ ನಡೆಸಲು ಸಾಧ್ಯವಾಗುವುದು ಅತ್ಯಂತ ಪ್ರಮುಖ ಎಂದು ನಾವು ತಿಳಿದಿದ್ದೇವೆ. ಇದೇ ಕಾರಣಕ್ಕೆ, ಮೈಂಡ್‌ಅಪ್, ಕ್ರೈಸಿಸ್ ಟೆಕ್ಸ್ಟ್ ಲೈನ್ ಮತ್ತು Snap ಪೇರೆಂಟ್ಸ್ ಪರಿಣಿತರೊಂದಿಗೆ ಪಾಲುದಾರಿಕೆ ಹೊಂದಿದ್ದು, Snap ಬಗ್ಗೆ ನಿಮ್ಮ ಹದಿಹರೆಯದ ಮಕ್ಕಳೊಂದಿಗೆ ಸಂಪರ್ಕ ಸಾಧಿಸುವುದು ಹೇಗೆ, ಸಂಭಾವ್ಯ ಕಳವಳಕಾರಿ ವರ್ತನೆಯನ್ನು ಗುರುತಿಸುವುದು ಮತ್ತು ಆ್ಯಪ್‌ನಲ್ಲಿ ಸೌಖ್ಯವನ್ನು ಅಭ್ಯಾಸ ಮಾಡುವುದು ಹೇಗೆ ಎಂಬ ಬಗ್ಗೆ ಸಂವಾದ ಆರಂಭ ಮಾಡುವ ಅಂಶಗಳನ್ನು ಗುರುತಿಸಿದ್ದೇವೆ!

## ತೊಡಗಿಸಿಕೊಳ್ಳಿ

ನಿಮ್ಮದೇ Snapchat ಖಾತೆಯನ್ನು ರಚಿಸುವುದು, ಆ್ಯಪ್ ಅನ್ನು ಅರ್ಥ ಮಾಡಿಕೊಳ್ಳಲು ಮತ್ತು ನಿಮ್ಮ ಹದಿಹರೆಯದವರೊಂದಿಗೆ ಉತ್ತಮವಾಗಿ ಸಂಪರ್ಕ ಸಾಧಿಸಲು ಸಹಾಯ ಮಾಡುತ್ತದೆ.

**ಪ್ರೋ ಟಿಪ್**: ನಿಮ್ಮ ಹೊಸ Snapchat ಅನ್ನು ಬಳಸುವ ಬಗ್ಗೆ ನಿಮ್ಮ ಹದಿಹರೆಯದ ಮಕ್ಕಳು ನಿಮಗೆ ಬೋಧಿಸಿದ್ದಾರೆಯೇ!



## ಸಂವಾದ ಮುಂದುವರಿಸುವುದಕ್ಕೆ ಕೇಳಬಹುದಾದ ಕೆಲವು ಮೋಜಿನ ಪ್ರಶ್ನೆಗಳು ಇಲ್ಲಿವೆ:

- ನಿಮ್ಮ Bitmoji ಹೇಗೆ ಕಾಣಿಸುತ್ತದೆ ಎಂದು ನಾನು ನೋಡಬಹುದೇ?
- ನೀವು ಕುಟುಂಬದ ಖಾಸಗಿ ಕಥೆ ಅಥವಾ ಗ್ರೂಪ್ ಚಾಟ್ ಅನ್ನು ನಮಗಾಗಿ ರಚಿಸಲು ಬಯಸುತ್ತೀರಾ?
- ಯಾವ ಫಿಲ್ಟರ್ ಅನ್ನು ನೀವು ಹೆಚ್ಚಾಗಿ ಬಳಸುತ್ತೀರಿ?
- ಯಾವ ಡಿಸ್ಕವರ್ ಶೋ ನಿಮ್ಮ ಮೆಚ್ಚಿನದ್ದು? ನನಗೆ ಯಾವುದು ಇಷ್ಟ?
- Snapchat ನಲ್ಲಿ ಹೇಗೆ ಆತ್ಮೀಯ ಸ್ನೇಹಿತರು ಕೆಲಸ ಮಾಡುತ್ತಾರೆ?
- ನಿಮ್ಮ ಅತಿ ದೀರ್ಘ Snapstreak ಯಾರು?
- ನಾನು Snap ಅನ್ನು ಉಳಿಸಬಹುದೇ? ನಾನು ಇದನ್ನು ಉಳಿಸಿದರೆ ಅದು ಎಲ್ಲಿಗೆ ಹೋಗುತ್ತದೆ?
- Snap ಮ್ಯಾಪ್‌ನಲ್ಲಿ ನಾನು ಗೋಸ್ಟ್ ಮೋಡ್‌ಗೆ ಹೇಗೆ ಹೋಗಬಹುದು?
- ಆ್ಯಪ್‌ನಲ್ಲಿ ನಿಮ್ಮ ಮೆಚ್ಚಿನ ಟ್ಯಾಬ್ ಯಾವುದು?
- ನಾನು ಏನನ್ನು ಪೋಸ್ಟ್ ಮಾಡುತ್ತೇನೆ ಎಂಬುದನ್ನು ನನ್ನ ಸ್ನೇಹಿತರು ಮಾತ್ರ ನೋಡುತ್ತಾರೆ ಎಂಬುದನ್ನು ನಾನು ಹೇಗೆ ಖಚಿತಪಡಿಸಿಕೊಳ್ಳುವುದು?
- ನಿಮ್ಮ ಮೆಚ್ಚಿನ Snap ಗೇಮ್ ಯಾವುದು?


## ಒಂದು ಆತಂಕವನ್ನು ಗುರುತಿಸುವುದು:

ನಿಮ್ಮ ಹದಿಹರೆಯದ ಮಕ್ಕಳ ಯಾವ ವರ್ತನೆಯ ಬಗ್ಗೆ ಗಮನ ಇಡಬೇಕು ಎಂಬುದನ್ನು ತಿಳಿದುಕೊಳ್ಳುವುದು ಅತ್ಯಂತ ಪ್ರಮುಖವಾಗಿದೆ. ಈ ವರ್ತನೆಗಳು ನಿಮ್ಮ ಹದಿಹರೆಯದ ಮಕ್ಕಳು ಆನ್‌ಲೈನ್‌ನಲ್ಲಿ ತೊಂದರೆ ಹೊಂದಿದ್ದಾರೆ ಎಂಬುದನ್ನು ಸೂಚಿಸುತ್ತದೆ ಮತ್ತು ನಿಮ್ಮ, ಆಪ್ತ ಸಲಹೆಗಾರರು ಅಥವಾ ಇನ್ನೊಬ್ಬ ವಯಸ್ಕರ ಹೆಚ್ಚುವರಿ ಸಲಹೆಯನ್ನು ಬಯಸಬಹುದು. ಈ ಮುಂದಿನ ಯಾವುದನ್ನಾದರೂ ನೀವು ಗಮನಿಸುತ್ತಿದ್ದೀರಾ?


- ವ್ಯಕ್ತಿತ್ವದಲ್ಲಿ ವ್ಯತ್ಯಾಸ (ಉದ್ವೇಗ, ಭೀತಿ ಅಥವಾ ಸಿಟ್ಟು ಹೆಚ್ಚಾಗುವುದು)
- ತಂತ್ರಜ್ಞಾನದ ಬಗ್ಗೆ ಸಂವಾದಗಳನ್ನು ದೂರವಿಡುವುದು
- ತಮ್ಮ ಫೋನ್ ಅಥವಾ ಲಾಪ್‌ಟಾಪ್ ಬಳಕೆಯನ್ನು ದೂರವಿಡುವುದು
- ಸ್ನೇಹಿತರು ಮತ್ತು ಕುಟುಂಬದಿಂದ ಹಿಂದೆ ಸರಿಯುವುದು
- ಶಾಲೆ ವರ್ತನೆಯಲ್ಲಿ ಬದಲಾವಣೆ (ಕಡಿಮೆ ಅಂಕಗಳು, ಕಳಪೆ ಹಾಜರಾತಿ, ತರಗತಿಯಲ್ಲಿ ನಿದ್ದೆ ಹೋಗುವುದು)
- ಸ್ವಯಂ ಅಪಾಯದ ಕಲ್ಪನೆಗಳು



ನಿಮ್ಮ ಹದಿಹರೆಯದ ಮಕ್ಕಳೊಂದಿಗೆ ಮಾತನಾಡಿ ಮತ್ತು ವೃತ್ತಿಪರರಿಂದ ಸಂಭಾವ್ಯವಾಗಿ ಸಹಾಯವನ್ನು ಪಡೆಯಿರಿ ಅಥವಾ Here For You ಪರಿಕರವನ್ನು ನೋಡಿ. ಯಾವುದೇ ತುರ್ತು ವಿಪತ್ತಿಗೆ, ಕ್ರೈಸಿಸ್ ಟೆಕ್ಸ್ಟ್ ಲೈನ್ 24/7 ಲಭ್ಯವಿದ್ದು, **KIND ಎಂದು 741741** ಗೆ ಪಠ್ಯ ಕಳುಹಿಸಬಹುದು ಎಂಬುದು ಅವರಿಗೆ ತಿಳಿದಿದೆ ಎಂದು ಖಚಿತಪಡಿಸಿಕೊಳ್ಳಿ. ಅವರ ತರಬೇತಿ ಹೊಂದಿದ ವಿಪತ್ತು ಆಪ್ತಸಲಹೆಗಾರರೊಂದಿಗೆ Snapchat ಸಮುದಾಯವು ಉಚಿತ, ಗೌಪ್ಯ ಬೆಂಬಲವನ್ನು ಹೊಂದಿದೆ ಎಂಬುದನ್ನು ಖಚಿತಪಡಿಸಲು ನಾವು ಅವರೊಂದಿಗೆ ನೇರವಾಗಿ ಪಾಲುದಾರಿಕೆ ಹೊಂದಿದ್ದೇವೆ.




CRISIS TEXT LINE |



## ಸೌಖ್ಯದ ಅಭ್ಯಾಸ ಮಾಡುವುದು:

ನೀವು ಹಂಚಿಕೊಳ್ಳಲು ಬಯಸಿದ ವ್ಯಕ್ತಿಗಳು ಮಾತ್ರ ವಿಷಯಗಳನ್ನು ನೋಡಬಹುದಾದ ರೀತಿಯಲ್ಲಿ Snapchat ಅನ್ನು ವಿನ್ಯಾಸ ಮಾಡಲಾಗಿದೆ. ವಿನ್ಯಾಸ ಆಧರಿತ ಸುರಕ್ಷತೆ ವಿಧಾನವನ್ನು ಬಳಸಿ ಹೊಸ ಉತ್ಪನ್ನಗಳು ಮತ್ತು ವೈಶಿಷ್ಟ್ಯಗಳನ್ನು ಅಭಿವೃದ್ಧಿಪಡಿಸುತ್ತೇವೆ ಮತ್ತು ನಮ್ಮ ಸಮುದಾಯದಲ್ಲಿ ಅವರು ಅಥವಾ ಅವರ ಸ್ನೇಹಿತರು ಮಾನಸಿಕ ಆರೋಗ್ಯ ವಿಪತ್ತನ್ನು ಅನುಭವಿಸುತ್ತಿದ್ದರೆ ಮುನ್ನೆಚ್ಚರಿಕೆ ಸೌಖ್ಯ ಪರಿಕರಗಳು ಮತ್ತು ಸಂಪನ್ಮೂಲಗಳಿಗೆ ಅವರು ಪ್ರವೇಶಾವಕಾಶ ಹೊಂದಲು ಸಹಾಯ ಮಾಡುತ್ತೇವೆ.

## ನಿಮ್ಮ ಹದಿಹರೆಯದ ಮಕ್ಕಳ ಬಗ್ಗೆ ನಿಗಾ ಇರಿಸಲು ಇಲ್ಲೊಂದಿಷ್ಟು ವಿಧಾನಗಳಿವೆ:

- ನೀವು ಧ್ಯಾನ ಮಾಡಲು ಎಂದಾದರೂ ಹೆಡ್‌ಸ್ಪೇಸ್ ಬಳಸುತ್ತೀರಾ? ಧ್ಯಾನ ಅಥವಾ ಸಾವಧಾನತೆ ಅರಿವನ್ನು ಅಭ್ಯಾಸ ಮಾಡುವ ಮೂಲಕ ಒತ್ತಡ ಕಡಿಮೆ ಮಾಡಬಹುದು ಮತ್ತು ಯೋಗಕ್ಷೇಮವನ್ನು ಸುಧಾರಿಸಬಹುದು ಎಂದು ಸಂಶೋಧನೆಯಿಂದ ತಿಳಿದುಬಂದಿದೆ.
- ಇತರರ Snapchat ಅನ್ನು ನೀವು ವರದಿ ಮಾಡಲು ಬಯಸಿದರೆ, ಹೇಗೆ ಎಂಬುದು ನಿಮಗೆ ತಿಳಿದಿದೆಯೇ?
- ಸುರಕ್ಷತೆಗೆ ನಿಗದಿಸಿದ ಸುರಕ್ಷತೆ ಸ್ನ್ಯಾಪ್‌ಶಾಟ್ ಡಿಸ್ಕವರ್ ಚಾನೆಲ್ ಅನ್ನು ನೀವು ವೀಕ್ಷಿಸುತ್ತೀರಾ?
- Here For You ಎಂಬುದಕ್ಕೆ ನೀವು ಸಬ್‌ಸ್ಕ್ರಿಪ್ಶನ್ ಮಾಡಿದ್ದೀರಾ? Snapchat ನಲ್ಲಿ ನಿಮ್ಮ ಹುಡುಕಾಟ ಬಾರ್‌ನಲ್ಲಿ "Here For You" ಎಂಬುದನ್ನು ಹುಡುಕುವ ಮೂಲಕ ಇದನ್ನು ಕಂಡುಕೊಳ್ಳಬಹುದು
- Snapchat ನಲ್ಲಿ ಏನೋ ನಿಮಗೆ ಚಿಂತೆಗೀಡು ಮಾಡಿದ್ದರೆ ಯಾರ ಜೊತೆಗಾದರೂ ಮಾತನಾಡಬೇಕು ಎಂಬ ಭಾವ ಹೊಂದಿದ್ದೀರಾ?
- Snapchat ನಲ್ಲಿ ನಿಮ್ಮ ಬೆಂಬಲಕ್ಕೆ ಯಾವ ಸಂಪನ್ಮೂಲಗಳು ಇವೆ ಎಂಬುದು ನಿಮಗೆ ತಿಳಿದಿದೆಯೇ?
- ಆ್ಯಪ್‌ನಲ್ಲಿ ನೀವು ಎಷ್ಟು ಸಮಯವನ್ನು ಕಳೆಯುತ್ತೀರಿ?
- ಆ್ಯಪ್ ಬಳಸುವಾಗ ನೀವು ಚಿತ್ತಸ್ಥೈರ್ಯ ಕುಂದಿದ ಭಾವನೆ ಹೊಂದುತ್ತೀರಾ? ಈ ಭಾವನೆಯ ನಂತರ ನೀವು ಏನು ಮಾಡುತ್ತೀರಿ?

"

**ಸಾವಧಾನತೆ ಅರಿವಿನ ಅಭ್ಯಾಸ ಮಾಡುವುದು, ಕೃತಜ್ಞತೆಯನ್ನು ಅಭಿವ್ಯಕ್ತಗೊಳಿಸುವುದು ಮತ್ತು ವಿನಯಶೀಲವಾಗಿ ವರ್ತಿಸುವಂಥ ಧನಾತ್ಮಕ ಮಾನಸಿಕ ಹವ್ಯಾಸಗಳನ್ನು ರೂಢಿಸಿಕೊಳ್ಳುವ ಮೂಲಕ ನಮ್ಮ ಜೀವನಕ್ಕೆ ಹೆಚ್ಚು ಖುಷಿ ಮತ್ತು ಸೌಖ್ಯವನ್ನು ತರುವ ಸಾಮರ್ಥ್ಯವನ್ನು ನಾವೆಲ್ಲರೂ ಹೊಂದಿದ್ದೇವೆ.**

***- ಮೊಲ್ಲಿ ಸ್ಟೆವಾರ್ಡ್ ಲಾವ್ಲರ್, ಪಿಎಚ್‌ಡಿ***

mindup For Life | The Goldie Hawn Foundation

"

## ನಿಮ್ಮ ಹದಿಹರೆಯದ ಮಗ/ಮಗಳೊಂದಿಗೆ ಮಾತನಾಡಿದ ನಂತರ:

ಈಗ Snapchat ಬಗ್ಗೆ ಸಂವಹನ ನಡೆಸಲು ನೀವು ಮತ್ತು ನಿಮ್ಮ ಹದಿಹರೆಯದ ಮಗ/ಮಗಳು ಪರಿಣಿತರಾಗಿದ್ದಾರೆ. ಭವಿಷ್ಯಕ್ಕೆ ಇನ್ನಷ್ಟು ಒಪ್ಪಂದಗಳನ್ನು ಮಾಡಿಕೊಳ್ಳುವುದು ಮತ್ತು ಈ ಸಂವಾದಗಳನ್ನು ನೀವು ಹೊಂದುತ್ತಿರುತ್ತೀರಿ ಎಂಬುದನ್ನು ಖಚಿತಪಡಿಸಿಕೊಳ್ಳುವುದು ಉತ್ತಮ ವಿಷಯವಾಗಿದೆ! ಸಾಮಾಜಿಕ ಮಾಧ್ಯಮ ಒಪ್ಪಂದ ರಚನೆ ಮಾಡುವುದು ಕೂಡಾ ಗೌಪ್ಯತೆ ಮತ್ತು ವಿಶ್ವಾಸವನ್ನು ಎರಡೂ ಕಡೆಗಳಲ್ಲಿ ಕಾಯ್ದುಕೊಳ್ಳಲು ಸಹಾಯ ಮಾಡಬಲ್ಲದು. ಈ ಭರವಸೆಗಳನ್ನು ಮಾಡುವ ಮೂಲಕ, ಎರಡೂ ಪಕ್ಷಗಳ ಮಧ್ಯೆ ವಿಶ್ವಾಸವನ್ನು ರೂಪಿಸಲು ಇದು ಸಹಾಯ ಮಾಡಬಹುದು.

ನಿಮ್ಮ ಹದಿಹರೆಯದ ಮಗ/ಮಗಳೊಂದಿಗೆ ಆರೋಗ್ಯಕರ ಸಂವಹನವನ್ನು ನಡೆಸಲು ಮತ್ತು ಆರೋಗ್ಯಕರ ಸ್ಕ್ರೀನ್ ಮತ್ತು ಸಾಮಾಜಿಕ ಮಾಧ್ಯಮ ಹವ್ಯಾಸಗಳ ಬೆಳವಣಿಗೆಗೆ ಬೆಂಬಲಿಸಲು ಕೆಲವು ಸಂವಾದಗಳ ಆರಂಭಿಕ ಅಂಶಗಳಿವೆ:

- ಮಾತನಾಡುವ ಸಂಪ್ರದಾಯವನ್ನು ರಚಿಸಿ; ಕುಟುಂಬದ ಸದಸ್ಯರು ಊಟ ಮಾಡುವಾಗ ಮಾತನಾಡುವುದಕ್ಕೆ ಮತ್ತು ಕೇಳುವುದಕ್ಕೆ ಸಮಯವನ್ನು ಮೀಸಲಿಡಿ
- ಸಂವಾದದಲ್ಲಿ ನಿಮ್ಮ ಹದಿಹರೆಯದವರನ್ನು ತೊಡಗಿಸಿಕೊಳ್ಳಿ. "ಈ ಬಗ್ಗೆ ನಿಮ್ಮ ಅಭಿಪ್ರಾಯವೇನು?" ಎಂಬಂತಹ ಪ್ರಶ್ನೆಗಳನ್ನು ಕೇಳಿ ಮತ್ತು ಮುಕ್ತವಾಗಿ ಅವರ ಅಭಿಪ್ರಾಯವನ್ನು ವ್ಯಕ್ತಪಡಿಸಲಿ.
- ಗಮನ ಬೇರೆಡೆ ಸೆಳೆಯುವಿಕೆಯನ್ನು ನಿವಾರಿಸುವ ಮೂಲಕ ಮತ್ತು ಕಣ್ಣಿನ ಸಂಪರ್ಕವನ್ನು ನಿರ್ವಹಿಸುವ ಮೂಲಕ ನಿಜವಾಗಿಯೂ ಕೇಳಿಸಿಕೊಳ್ಳುವುದು ಹೇಗೆ ಎಂದು ಕಲಿತುಕೊಳ್ಳಿ
- ಪ್ರತಿ ದಿನವೂ ಸಾಮಾಜಿಕ ಮಾಧ್ಯಮ ಅಥವಾ ಫೋನ್‌ನಿಂದ "ವಿರಾಮ"ತೆಗೆದುಕೊಳ್ಳುವ ಸಮಯದ ಅವಧಿಯನ್ನು ಪರಸ್ಪರ ಒಪ್ಪಿಗೆ ನಿರ್ಧರಿಸಿಕೊಳ್ಳಿ
- ಆನ್‌ಲೈನ್ ಅಪಾಯಗಳನ್ನು ನಿಭಾಯಿಸಲು ಅವರು ಮಾಡಬಹುದಾದಂಥ ಬ್ಲಾಕ್ ಮಾಡುವುದು ಮತ್ತು ವರದಿ ಮಾಡುವುದು ಮುಂತಾದ ಪ್ರಾಯೋಗಿಕ ಸಂಗತಿಗಳನ್ನು ಅವರಿಗೆ ಒದಗಿಸುವ ಮೂಲಕ, ಆನ್‌ಲೈನ್ ಅಪಾಯಗಳು ಮತ್ತು ಕಳವಳಗಳ ಬಗ್ಗೆ ಮುಕ್ತವಾಗಿ ಆನ್‌ಲೈನ್‌ನಲ್ಲಿ ಮಾತನಾಡಿ

ನಿಮ್ಮ ಹದಿಹರೆಯದ ಮಗು/ಮಗಳು ಸಾಮಾಜಿಕ ಮಾಧ್ಯಮದಲ್ಲಿ ಸುರಕ್ಷಿತವಾಗಿರಲು ಮತ್ತು ಸೌಖ್ಯವಾಗಿರಲು ಇಲ್ಲಿ ಕೆಲವು ಮಾರ್ಗಸೂಚಿಗಳಿವೆ:

- ನಿಮಗೆ ನಿಜವಾಗಿಯೂ ಪರಿಚಿತವಿರುವವರಿಂದ ಮಾತ್ರ ಫ್ರೆಂಡ್ ರಿಕ್ವೆಸ್ಟ್‌ಗಳನ್ನು ಸಮ್ಮತಿಸುವ ಮೂಲಕ ನಿಮ್ಮ ಸಮೀಪದ ಬಳಗದವರಿಗೆ ಸಾಮಾಜಿಕ ಪೋಸ್ಟ್‌ಗಳನ್ನು ಮೀಸಲಿಡುವುದರ ಪ್ರಾಮುಖ್ಯತೆ
- ಎಂದಿಗೂ ನಿಮ್ಮನ್ನು ಕೇಳಿಕೊಳ್ಳಿ: ಡಬ್ಲ್ಯೂಡಬ್ಲ್ಯೂಜಿಎಸ್? (ಅಜ್ಜಿ ಏನು ಹೇಳುತ್ತಾಳೆ) ನೀವು ಪೋಸ್ಟ್ ಮಾಡುವುದಕ್ಕೂ ಮೊದಲು!
- ಮೂಕಪ್ರೇಕ್ಷಕರಾಗಬೇಡಿ - ನಿಮಗೆ ಅನಾನುಕೂಲ ಎನಿಸಿದ ಏನಾದರೂ ನಿಮಗೆ ಕಂಡುಬಂದರೆ, ಅದನ್ನು ವರದಿ ಮಾಡಿ!
- ಯಾವಾಗಲೂ ಸಮುದಾಯದ ವಿನಯಶೀಲತೆ ಮಾರ್ಗಸೂಚಿಗಳ ಪರಿಧಿಯ ಒಳಗೆ ವ್ಯವಹರಿಸಿ



# Snapchat ಪದಕೋಶ

## (ಎ - ಝೆಡ್)

**Discover:** Snap ನ ಒರಿಜಿನಲ್ಸ್ ಮತ್ತು ಮುಖ್ಯವಾಹಿನಿ ಮಾಧ್ಯಮ ಸೇರಿದಂತೆ ಪ್ರಮುಖ ಸುದ್ದಿ ಮತ್ತು ಮನರಂಜನೆಯನ್ನು ನೋಡಿ.

**Snapcode:** Snapcode ಎಂಬುದು ವಿಶೇಷ ರೀತಿಯ ಚಿತ್ರವಾಗಿದ್ದು, ಇದನ್ನು ನೀವು Snapchat ಇಂದ ಸ್ಕ್ಯಾನ್ ಮಾಡಬಹುದು. ಹೊಸ ಸ್ನೇಹಿತರನ್ನು ಸೇರಿಸುವುದು ಅಥವಾ ಫಿಲ್ಟರುಗಳು ಮತ್ತು ಲೆನ್ಸ್‌ಗಳನ್ನು ಅನ್‌ಲಾಕ್ ಮಾಡುವುದು ಇತ್ಯಾದಿಯನ್ನು ಇದರ ಮೂಲಕ ಮಾಡಬಹುದು.

**Snap ಮ್ಯಾಪ್:** ಈ ಟ್ಯಾಬ್ ಬಳಸಿ ಏನು ನಡೆಯುತ್ತಿದೆ ಎಂಬುದನ್ನು ನೋಡಿ, ನಿಮ್ಮ ಸ್ನೇಹಿತರನ್ನು ಕಂಡುಕೊಳ್ಳಿ ಮತ್ತು ಸಾಹಸಗೈಯಲು ಪ್ರೋತ್ಸಾಹ ಪಡೆಯಿರಿ. ಸ್ಥಳ ಹಂಚಿಕೆಯು ಡೀಫಾಲ್ಟ್ ಆಗಿ ಆಫ್ ಆಗಿರುತ್ತದೆ. ಸ್ನೇಹಿತರೊಂದಿಗೆ ನೀವು ಸ್ಥಳ ಹಂಚಿಕೊಳ್ಳಬೇಕೆ ಅಥವಾ ನಿಮ್ಮನ್ನು ನೀವು ಗೋಸ್ಟ್ ಮೋಡ್‌ನಲ್ಲಿ ಇಡಬೇಕೆ ಎಂಬುದನ್ನು ನೀವು ನಿರ್ಧರಿಸಿ.

**Snap ಸ್ಟಾರ್‌ಗಳು:** ವ್ಯಾಪಕ ಪ್ರಮಾಣದ ಪ್ರೇಕ್ಷಕರನ್ನು ಹೊಂದಿರುವ ಕ್ರಿಯೇಟರ್‌ಗಳು (ಪ್ರಭಾವಿಗಳು ಮತ್ತು ಜನಪ್ರಿಯ ವ್ಯಕ್ತಿಗಳು) ಗೋಲ್ಡ್ ಸ್ಟಾರ್ ಹೊಂದಿರುತ್ತಾರೆ. ಈ ಕ್ರಿಯೇಟರ್‌ಗಳಿಗೆ ನೀವು ಚಂದಾದಾರರಾಗಬಹುದು.

**ಕಸ್ಟಮ್ ಕಥೆ:** ನಿಮ್ಮ ಕಸ್ಟಂ ಕಥೆಗೆ ಸ್ನೇಹಿತರನ್ನು ಆಯ್ಕೆ ಮಾಡಿ! ಸೇರುವ ಎಲ್ಲರೂ ಈ ಕಥೆಗೆ ಸೇರಿಸಬಹುದು ಮತ್ತು ಇತರ ಸದಸ್ಯರನ್ನು ನೋಡಬಹುದು.

**ಕ್ಯಾಮೆರಾ:** ಇದರ ಮೂಲಕ ನಿಮ್ಮ ಸ್ನೇಹಿತರಿಗೆ ನೀವು ಫೋಟೋಗಳು ಅಥವಾ ವೀಡಿಯೋಗಳ Snap ಗಳನ್ನು ಕಳುಹಿಸಬಹುದು!

**ಕ್ರಿಯೇಟಿವ್ ಟೂಲ್ಸ್:** ನೀವು Snap ಅನ್ನು ಸೃಷ್ಟಿಸಿದ ನಂತರ, ಸ್ಟಿಕ್ಕರ್‌ಗಳು, ಪಠ್ಯ, ಡೂಡಲ್‌ಗಳು ಮುಂತಾದವನ್ನು ಸೇರಿಸಬಹುದು.

**ಖಾಸಗಿ ಕಥೆ:** ಖಾಸಗಿ ಕಥೆಗಳು ಆಯ್ದ ಕೆಲವೇ ಸ್ನೇಹಿತರೊಂದಿಗೆ ಹಂಚಿಕೊಳ್ಳುವುದಕ್ಕಾಗಿ Snapchatter ಗಳು ಕಥೆಯನ್ನು ರಚಿಸಲು ಅನುವು ಮಾಡುತ್ತದೆ.

**ಗೇಮ್ಸ್ ಮತ್ತು Snap ಮಿನಿಗಳು:** Snapchat ನಲ್ಲಿ ಸ್ನೇಹಿತರೊಂದಿಗೆ ಸಮಯ ಕಳೆಯಲು ಗೇಮ್‌ಗಳು ಮೋಜಿನ ವಿಧಾನವಾಗಿದೆ! Snap ಮಿನಿಗಳು ಬೈಟ್ ಗಾತ್ರದ ಯುಟಿಲಿಟಿಗಳಾಗಿದ್ದು, ರಾತ್ರಿ ಸಿನಿಮಾ ನೋಡುವುದು ಅಥವಾ ಫ್ಲಾಶ್‌ಕಾರ್ಡ್‌ಗಳ ಡೆಕ್ ರಚಿಸುವಂತಹದ್ದನ್ನು ಮಾಡಲು ಸ್ನೇಹಿತರಿಗಾಗಿ ವಿಶೇಷವಾಗಿ ರೂಪಿಸಲಾಗಿದೆ.

**ಗೋಸ್ಟ್ ಮೋಡ್:** ಸಕ್ರಿಯಗೊಳಿಸಿದಾಗ, Snap ಮ್ಯಾಪ್‌ನಲ್ಲಿ ನಿಮ್ಮ ಸ್ಥಳವನ್ನು ನಿಮ್ಮ ಸ್ನೇಹಿತರು ನೋಡಲು ಸಾಧ್ಯವಿರುವುದಿಲ್ಲ!

**ಚಾಟ್:** ನಿಮ್ಮ ನಿಜವಾದ ಸ್ನೇಹಿತರೊಂದಿಗೆ ವೀಡಿಯೋ, ಫೋನ್ ಅಥವಾ ಪಠ್ಯ ಚಾಟ್‌ಗಳನ್ನು ಕಳುಹಿಸಿ.

**ತ್ವರಿತ ಸೇರ್ಪಡೆ:** ನೀವು ಈಗಾಗಲೇ ಸ್ನೇಹಿತರಾಗಿರುವುದು ಮತ್ತು ನೀವು ಸಬ್‌ಸ್ಕ್ರಿಪ್ಶನ್ ಮಾಡಿರುವುದು ಎಂಬುದರ ರೀತಿ ಸ್ನೇಹಿತರ ಶಿಫಾರಸುಗಳು ಕೆಲವು ಅಂಶಗಳನ್ನು ತ್ವರಿತ ಸೇರ್ಪಡೆ ಆಧರಿಸಿರುತ್ತದೆ.

**ನನಗೆ ಮಾತ್ರ:** ಈ ವೈಶಿಷ್ಟ್ಯವನ್ನು ನೆನಪುಗಳಲ್ಲಿ ಕಾಣಬಹುದು ಮತ್ತು ತಮ್ಮ ನೆನಪುಗಳಲ್ಲಿ ಉಳಿಸಿದ Snap ಗಳು ಮತ್ತು ಕಥೆಗಳನ್ನು ನನಗೆ ಮಾತ್ರ ಟ್ಯಾಬ್‌ಗೆ Snapchatter ಸ್ಥಳಾಂತರಿಸಲು ಅನುವು ಮಾಡುತ್ತದೆ. ಇದನ್ನು ನೋಡಲು ಪಾಸ್‌ಕೋಡ್ ಅಗತ್ಯವಿರುತ್ತದೆ.

**ನನ್ನ ಕಥೆ:** ಕಾಲಾನುಕ್ರಮದಲ್ಲಿ ಪ್ಲೇ ಆಗುವ Snap ಗಳ ಸರಣಿ ಇದಾಗಿದ್ದು, 24 ಗಂಟೆಗಳವರೆಗೆ ಸ್ನೇಹಿತರು ನೋಡಬಹುದು. ಎಲ್ಲರಿಗೂ, ನನ್ನ ಸ್ನೇಹಿತರಿಗೆ ಅಥವಾ ಕಸ್ಟಮೈಸ್ ಮಾಡಿದ ಜನರ ಪಟ್ಟಿಗೆ ಹಂಚಿಕೊಳ್ಳುವ ಆಯ್ಕೆಯನ್ನೂ ನೀವು ಮಾಡಬಹುದು.

**ನಮ್ಮ ಕಥೆ:** ಸಮುದಾಯದಾದ್ಯಂತ ವಿಭಿನ್ನ Snapchatter ಗಳು ಸಲ್ಲಿಸಿದ Snap ಗಳ ಸಂಗ್ರಹ ಇದು. ನಮ್ಮ ಕಥೆಯಲ್ಲಿ ಕಾಣಿಸಿಕೊಳ್ಳುವ Snap ಗಳು ಸಾರ್ವಜನಿಕ ವಿಷಯವಾಗಿದೆ. ಇವುಗಳನ್ನು Snap ಮ್ಯಾಪ್‌ಗಳಲ್ಲಿ ಮತ್ತು ಪ್ಲಾಟ್‌ಫಾರಂ ಹೊರಗೂ ತೋರಿಸಬಹುದು.

**ನೆನಪುಗಳು:** ನಿಮ್ಮ ಮೆಮೊರಿಗಳಿಗೆ ಉಳಿಸಿದ Snap ಗಳು ಮತ್ತು ಕಥೆಗಳ Snapchatter ಗಳ ವೈಯಕ್ತಿಕ ಸಂಗ್ರಹ.

**ಫಿಲ್ಟರ್‌ಗಳು:** ಒಂದು Snap ಮೇಲೆ ಬಲಕ್ಕೆ ಸ್ವೈಪ್ ಮಾಡಿ, ಬಣ್ಣದ ಎಫೆಕ್ಟ್‌ಗಳನ್ನು ಸೇರಿಸಲು, ಸ್ಥಳದ ಮಾಹಿತಿಯನ್ನು ತೋರಿಸಲು, ನಿಮ್ಮ Bitmoji ಯನ್ನು ವೈಶಿಷ್ಟ್ಯಗೊಳಿಸಲು, ನೀವು ಏನು ಮಾಡುತ್ತಿದ್ದೀರಿ ಎನ್ನುವುದನ್ನು ತೋರಿಸಲು, ಮತ್ತು ಇನ್ನಷ್ಟಕ್ಕಾಗಿ ಫಿಲ್ಟರ್ ಆಯ್ಕೆಗಳು ಕಾಣಿಸಿಕೊಳ್ಳುತ್ತವೆ.

**ಲೆನ್ಸ್‌ಗಳು:** ಲೆನ್ಸ್ ಕರೋಸಲ್ ಅನ್ನು ತೆರೆಯಲು ಮುಖದ ಮೇಲೆ ಟ್ಯಾಪ್ ಮಾಡಿ. 3D ಎಫೆಕ್ಟ್‌ಗಳು, ವಸ್ತುಗಳು, ಅಕ್ಷರಗಳು ಮತ್ತು ರೂಪಾಂತರಗಳನ್ನು ನಿಮ್ಮ Snap ಗಳಿಗೆ ಲೆನ್ಸ್‌ಗಳು ಸೇರಿಸುತ್ತವೆ.

**ಸ್ಟ್ರೀಕ್‌ಗಳು:** ಚಾಟ್ ಸ್ಕ್ರೀನ್‌ನಲ್ಲಿ ನಿಮ್ಮ ಸ್ನೇಹಿತರ ಹೆಸರಿನ ಪಕ್ಕ 🔥 ಇಮೋಜಿ ಮೂಲಕ ಕಾಣಿಸಿಕೊಳ್ಳುವ ಇದು, ಎಷ್ಟು ದಿನಗಳವರೆಗೆ ಸ್ಟ್ರೀಕ್ ಇದೆ (ಅಂದರೆ, ಪರಸ್ಪರರೊಂದಿಗೆ ವಿನಿಮಯ ಮಾಡಿಕೊಂಡ Snap ಗಳು) ಎಂಬುದನ್ನು ತೋರಿಸುವ ಸಂಖ್ಯೆಯಾಗಿರುತ್ತದೆ. ನೀವು ಯಾರೊಂದಿಗೆ ಹೆಚ್ಚು Snap ಮಾಡುತ್ತಿದ್ದೀರಿ ಎಂಬುದನ್ನು ಗುರುತಿಸುವ ಮೋಜಿನ, ಲಘುಹಾಸ್ಯದ ವಿಧಾನವೇ Snap ಸ್ಟ್ರೀಕ್ಸ್ ಆಗಿದೆ!

**ಸ್ಥಳ ಸೇವೆಗಳು:** ಫಿಲ್ಟರುಗಳು, ಹುಡುಕಾಟ, Snap ಮ್ಯಾಪ್, ಜಾಹೀರಾತು ಮತ್ತು ಇತರೆ ವೈಶಿಷ್ಟ್ಯಗಳಿಗೆ ನಿಮ್ಮ ಸ್ಥಳವನ್ನು Snapchat ಬಳಸುತ್ತದೆ. ಸಕ್ರಿಯಗೊಳಿಸಿದರೆ, ನೀವು Snapchat ತೆರೆದಿದ್ದಾಗ ನಿಮ್ಮ ಸ್ಥಳ ಅಪ್‌ಡೇಟ್ ಆಗುತ್ತದೆ.

**ಸ್ಪಾಟ್‌ಲೈಟ್:** ಒಂದೇ ಸ್ಥಳದಲ್ಲಿ Snapchat ಅನ್ನು ಕಂಡುಹಿಡಿಯಿರಿ ಮತ್ತು ಈ ಮನರಂಜನೆಯ ವೇದಿಕೆಯಲ್ಲಿ ನಮ್ಮ ಕಮ್ಯುನಿಟಿಯಾದ್ಯಂತ ದೃಷ್ಟಿಕೋನಗಳನ್ನು ನೋಡಿ

**ಹುಡುಕಾಟ:** ಹುಡುಕಾಟದಲ್ಲಿ ಟೈಪ್ ಮಾಡಿದರೆ, ನಿಮಗೆ ವಿಭಿನ್ನ ಸಂಗತಿಗಳು ಕಾಣಿಸುತ್ತವೆ. ಇದರಿಂದ, ನಿಮಗೆ ಹೆಚ್ಚು ಸೂಕ್ತವಾದದ್ದನ್ನು ನೀವು ಕಂಡುಕೊಳ್ಳಬಹುದು. ಉದಾ., ಸ್ನೇಹಿತರನ್ನು ಹುಡುಕುವುದು ಅಥವಾ Here For You ಪರಿಕರವನ್ನು ಪರಿಶೀಲಿಸುವುದು.



Snap Inc.

ಜುಲೈ 2021 ಆವೃತ್ತಿ